ಶ್ರೀ ಗಂಗಾಧರ ನಾಮೋಶಿ (ಗುಲ್ಬರ್ಗ).-ಕಾರ್ಯಕ್ರಮದ ಪಟ್ಟಿ ಮೊದಲು ಪಿಜಿಯನ್ ಹೋಲ್‌ನಲ್ಲಿರಲಿಲ್ಲ. ಇವತ್ತು ಇಲ್ಲಿಯೇ ಇಟ್ಟಿದ್ದಾರೆ.

Mr. SPEAKER.—That is a different matter and I will look into it. To say that Supplementary Demands will come to-day is a surprise is not correct.

Sri B. D. JATTI (Minister for Finance).—It was mentioned on 4th and everybody knows that it will be taken up to-day.

PAPERS LAID ON THE TABLE.

Sri ALUR HANUMANTHAPPA (Deputy Minister for Minor Irrigation).-Sir, on behalf of the Public Works Minister, I beg to lay on the Table of the House :

> "Notification No. PWD 13 MNR 61, dated 26th March 1962 (Contribution to be paid by every holder of land in the benefitted area of the Narasambudhi Tank in Nanjangud Taluk) as required under sub-section (2) of Section 30-C of the Mysore Irrigation Act, 1932."

Mr. SPEAKER.—(Addressing Sri Gopala Gowda) I am told that the agenda put up for to-day, was put at 4 o' clock yesterday in the pigeon-holes.

ಶ್ರೀ ಎಸ್. ಗೋಪಾಲಗೌಡ.—ತಪ್ಪು ಮಾಡಿದ್ದಲ್ಲದೆ ಸುಳ್ಳು ಏಕೆ ಸೆಕ್ರೆಟರಿಗಳು ಹೇಳಬೇಕು ?

Mr. SPEAKER.—I will just mention it. I find that there is a programme which has been issued mentioning the Voting of Demands for Supplementary and Additional Grants. The revised list which has been put is one more. So far as Supplementary Demands are concerned, this has been put, I am told, at 4 o' clock yesterday in the pigeon-hole and the revised programme has been put in the pigeon-holes to-day. I do not know whether it is correct or not. I will look into it.

I am not talking of revised programme. I want to know from the Hon'ble Members: Do they want me to understand that these Supplementary Demands alone were not put there yesterday ?

HON'BLE MEMBERS.—No.

SUPPLEMENTARY AND ADDITIONAL DEMANDS FOR GRANTS FOR THE YEAR 1962-63 (FIRST INSTALMENT)

Sri R. M. PATIL (Minister for Home).—Sir, on the recommendation of the Governor of Mysore, I beg to move :—

> " That a further sum not exceeding Rs. 5,50, 000 be granted to the Government to defray the charges which will come in course of payment during the year ending 31st day of March 1963, in respect of 'Police'. "

Mr. SPEAKER.—Motion moved:

> "That a further sum not exceeding Rs. 5, 50, 000 be granted to the Government to defray the charges which will come in course of payment during the year ending 31st day of March 1963, in respect of 'police'. "

All the Demands, *viz.*, Demand Nos. 13, 16, 17, 20, 22, 24, 25, 30, 31, 38, 39, 43, 44, 45, 46, 47, 48, 49, 51 and 54 can be taken as having been moved and they are open for discussion.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ ಮೊನ್ನೆ ತಾನೆ ಈ ಸಭೆ ಸೇರಿದಾಗ ಚೀಣೀಯರ ಆಕ್ರಮಣ ಸಂಬಂಧದಲ್ಲಿ ದೇಶದ ಒಂದು ತುರ್ತು ಪರಿಸ್ಥಿತಿ ಇರತಕ್ಕ ಸಮಯದಲ್ಲಿ ಸರ್ಕಾರಕ್ಕೆ ನಮ್ಮ ಸಕಲ ಬೆಂಬಲವನ್ನೂ ಕೊಟ್ಟು ತಾವು ಈ ದೇಶದಲ್ಲಿ ಚೀಣೀ ಆಕ್ರಮಣವನ್ನು ಎದುರಿಸುವುದಕ್ಕೋಸ್ಕರ ದೇಶವನ್ನೇ ತಯಾರು ಮಾಡತಕ್ಕ ಕಾಲದಲ್ಲಿ ತುರ್ತಾಗಿ ಇರತಕ್ಕ ವಿಷಯಗಳನ್ನು ಸರ್ಕಾರದವರು ಜಾಗ್ರತೆಯಾಗಿ ಎಷ್ಟೋ ಕಷ್ಟಂದರೂ ಮಾಡಬೇಕೆಂದು ನಮ್ಮ ಸರ್ವ ಸಹಕಾರವನ್ನು ಕೊಟ್ಟಿದ್ದೇವೆ. ಇವೊತ್ತಿನ ದಿವಸ ನಮ್ಮ ಘನ ಸರ್ಕಾರದವರು ನಮ್ಮ ಮುಂದೆ ತಂದಿರತಕ್ಕ 4 ಕೋಟಿ 57 ಲಕ್ಷ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡುಗಳನ್ನು ನೋಡಿದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಇವೊತ್ತಿನ ದಿವಸ ಸರ್ಕಾರದವರು ಚೀಣೀಯರ ಆಕ್ರಮಣದ ವಿಷಯವಾಗಿ ಯಾವುದನ್ನೂ ಕೂಡ ತಂದಿಲ್ಲ, ಎನ್ನುವುದು ಇದರಿಂದ ಅರ್ಥವಾಗುತ್ತದೆ. ಈ ಚೀಣಾ ಆಕ್ರಮಣ ಎನ್ನತಕ್ಕದ್ದು ಸಾರಿದ ಮೇಲೆ, ನ್ಯಾಷನಲ್ ಎಮರ್ಜೆನ್ಸಿಯನ್ನು ಈ ದೇಶದಲ್ಲಿ ಸಾರಿದ ಮೇಲೆ ಇವರು ಯಾವ ಬಾಬನ್ನು ಕೂಡ ಖರ್ಚು ಮಾಡುವುದರಲ್ಲಿ ಎಕಾನಮಿ ಮೆಜರ್ಸ್, ಮಿತವ್ಯಯ ಮಾಡುತ್ತಾರೆಂದು ನಾನು ಎಂದು ಕೊಂಡಿದ್ದೆ. ಮಿತವ್ಯಯ ಮಾಡಬೇಕು, ಹಣವನ್ನು ಉಳಿತಾಯ ಮಾಡಬೇಕು ಎಂದು ಡಂಗುರ ಹೊಡೆದು ಸಾರುತ್ತಾ ಇರುವ ಕಾಲದಲ್ಲಿ ಇವೊತ್ತು ನಮ್ಮ ಹಣಕಾಸಿನ ಸಚಿವರು 4½ ಕೋಟಿ ರೂಪಾಯಿಗಳ ಹೆಚ್ಚಿನ ಖರ್ಚು ಬೇಕು ಎಂದು ಕೇಳಿರುವುದನ್ನು ನೋಡಿದರೆ, ಚೀಣೀಯರ

(ಶ್ರೀ ಎಸ್. ಶಿವಪ್ಪ)

ಆಕ್ರಮಣದ ಬಗ್ಗೆ ಎಷ್ಟು ಉತ್ಸಾಹದಿಂದ ಎಷ್ಟು ಹಣವನ್ನು ಖರ್ಚು ಮಾಡುತ್ತಾರೆಂಬುದು ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಇಲ್ಲ. 4½ ಕೋಟಿ ರೂಪಾಯಿಗಳ ಸಪ್ಲಿಮೆಂಟರಿ ಡಿಮ್ಯಾಂಡನ್ನು ಈ ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಮಾನ್ಯ ಹಣಕಾಸಿನ ಸಚಿವರು ಕೇಳುತ್ತಿದ್ದಾರೆ, ಸಂತೋಷದಿಂದ ಒಪ್ಪಿಗೆಯನ್ನು ಕೊಡೋಣ ಎಂದು ಈ ಸಭೆಗೆ ಬಂದೆ. ಇಲ್ಲಿ ಈ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಎಲ್ಲಿ ನೋಡಿದರೂ ಕೂಡ ಅದಕ್ಕೆ ಸಂಬಂಧಪಟ್ಟ ವಿಷಯವೇ ಇಲ್ಲ. ನೀವು ಹೇಳತಕ್ಕ ಮಾತಿಗೂ ಕೃತಿಗೂ ಕೂಡ ಅಜಗಜಾಂತರ ವ್ಯತ್ಯಾಸ ಕಾಣುತ್ತದೆ. ಮೊನ್ನೆತಾನೆ ಹಣಕಾಸಿನ ಸಚಿವರು ಹೇಳಿದರು, ಸ್ಟೆನೋಗ್ರಾಫರ್ಸ್ ಕಂಟಿನ್ ಜೆನ್ಸಿ ಇತ್ಯಾದಿಗಳ ಎಕ್ಸ್‌ಪೆಂಡಿಚರನ್ನು ಕಡಿಮೆಮಾಡಿ ಅದರಿಂದ ಸುಮಾರು 75 ಲಕ್ಷ ರೂಪಾಯಿಗಳನ್ನು ಉಳಿತಾಯ ಮಾಡುತ್ತೇವೆಂದು ಹೇಳಿದರು. ಇವೊತ್ತು ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಜಾಸ್ತಿ ಕೇಳುತ್ತಿದ್ದಾರೆ. ನಾವು ಯಾವ ಮಾತನ್ನು ನಂಬೋಣ. ಹೇಳತಕ್ಕಂಥ ಮಾತಿನಲ್ಲಿ ಅರ್ಥವಿದೆಯೇ? ಇವರು ಹೇಳತಕ್ಕಂಥ ಮಾತಿನಲ್ಲಿ ನನಗೇನೋ ಅನುಮಾನಾಸ್ಪದವಾಗಿದೆ. ಈಗ ಸರ್ಕಾರದವರು ಕೇಳಿರತಕ್ಕ ನಾಲ್ಕೂವರೆ ಕೋಟಿ ಹೆಚ್ಚುವರಿ ಬೇಡಿಕೆಯಲ್ಲಿ ದೇಶದ ತುರ್ತು ಪರಿಸ್ಥಿತಿಗೆ ಏನಾದರೂ ಹಣ ಇದೆಯೇ? ಯಾವುದೂ ಕೂಡ ಇಲ್ಲ. ಮೊದಲು ಈ ಸಭೆಯ ಮುಂದೆ ಇಟ್ಟಂಥ ಹಣಕಾಸಿನ ಸೂಚನೆಯಲ್ಲಿ ಹಣವನ್ನು ಒದಗಿಸಲು ಅನಿವಾರ್ಯವೆನಿಸುವ ಬಾಬುಗಳಿಗೆ ಈ ಸಪ್ಲಿಮೆಂಟರಿ ಎಸ್ಟಿಮೇಟಿನಲ್ಲಿ ಹಣವನ್ನು ಒದಗಿಸಿದ್ದರೆ ಅದನ್ನು ಈಗ ನಾವು ಒಪ್ಪಬಹುದಾಗಿತ್ತು. ಆದರೆ ಇಲ್ಲಿ ಕಾಣಿಸುವಂತ ಬಾಬುಗಳಲ್ಲಿ ಒಂದೆರಡನ್ನು ಬಿಟ್ಟರೆ ಬಾಕಿ ಎಲ್ಲವೂ ಕೂಡ ಮೊದಲು ಈ ಸಭೆಯ ಮುಂದೆ ಇಟ್ಟಂಥ ಹಣಕಾಸಿನ ಮುನ್ನ ಸೂಚನೆಯ ಪತ್ರದಲ್ಲೇ ಈ ಎಲ್ಲಾ ಬಾಬುಗಳನ್ನು ಆವೊತ್ತು ಯೋಚನೆ ಮಾಡಬಹುದಾಗಿತ್ತು. ಆವೊತ್ತು ಕೂಡ ಈ ಬಾಬುಗಳನ್ನು ತೋರಿಸಿ ಇವುಗಳಿಗೆ ಮುಂದಿನ ವರ್ಷ ಎಷ್ಟು ಹಣಬೇಕು ಎಂಬುದನ್ನು ಲೆಕ್ಕಾಚಾರ ಹಾಕಿ ಇಡಬಹುದಾಗಿತ್ತು ಎಂದು ನನಗೆ ಕಾಣಿಸುತ್ತದೆ. ಈ ಸರ್ಕಾರದವರಿಗೆ ನಿಯೋಜಿತವಾದ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಕೆಲಸ ಮಾಡತಕ್ಕ ಬಾಕಚಕ್ಕತೆ ಇಲ್ಲ. ನಾಲ್ಕೂವರೆ ಕೋಟಿ ರೂಪಾಯಿಗಳನ್ನು ಕೇಳಿರುವ ಈ ಸಪ್ಲಿಮೆಂಟರಿ ಬಡ್ಜೆಟ್ ಏನಿದೆ ಇದು ಬಹಳ ಲೋಪ ದೋಷಗಳಿಂದ ಕೂಡಿದೆ ಎಂದು ನನಗೆ ಅನ್ನಿಸುತ್ತದೆ. ಇವೊತ್ತು ಸರ್ಕಾರದವರು ಕೇಳಿರತಕ್ಕ ಒಂದೊಂದು ಡಿಮ್ಯಾಂಡನ್ನು ನೋಡುತ್ತಾ ಹೋದರೆ ಅವುಗಳಿಗೆ ಹೆಚ್ಚು ಹೆಚ್ಚಾಗಿ ಹಣವನ್ನು ಕೇಳಿದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಮಿತವ್ಯಯ ಮಾಡಬೇಕು ಆದಷ್ಟು ಹಣವನ್ನು ಉಳಿತಾಯ ಮಾಡಬೇಕು, ದೇಶ ಸಂಕಷ್ಟ ಪರಿಸ್ಥಿತಿಯಲ್ಲಿರುವ ಕಾಲದಲ್ಲಿ, ಯುದ್ಧದ ನೆರವಿಗೆ ಆ ಹಣವನ್ನು ಖರ್ಚು ಮಾಡಬೇಕು ಎಂದು ಹೇಳುವ ಕಾಲದಲ್ಲಿ ಪೋಲೀಸು ಖಾತೆಯ ಮಂತ್ರಿಗಳು 5ಲಕ್ಷ 50ಸಾವಿರ ರೂಪಾಯಿಗಳನ್ನು ಒಂದು ಡಿಮ್ಯಾಂಡಿನಲ್ಲಿಟ್ಟಿದ್ದಾರೆ. "Item number (2) ರಲ್ಲಿ heavy use of vehicles on acount of prohibition raids" ಎಂದು ಹೇಳಿದ್ದಾರೆ. ಪಾನನಿರೋಧವನ್ನು, ತಡೆಗಟ್ಟತಕ್ಕ ಕಾಲದಲ್ಲಿ, ಪಾನನಿರೋಧವನ್ನು ಆಚರಣೆಗೆ ತರಲು ವಾಹನಗಳ ಸಂಚಾರಕ್ಕೋಸ್ಕರ ಎರಡೂವರೆ ಲಕ್ಷ ರೂಪಾಯಿಗಳು ಬೇಕು, ಅದಕ್ಕೋಸ್ಕರ ಈ ಬೇಡಿಕೆಯನ್ನು ಇಡುತ್ತೇವೆ ಎಂದು ಹೇಳುತ್ತಾರೆ. ಇವೊತ್ತಿನ ದಿವಸ ಮಿತವ್ಯಯ ಮಾಡಬೇಕು, ದೇಶದಲ್ಲಿ ಹಣವನ್ನು ಉಳಿಸಬೇಕು ಎಂದು ಹೇಳತಕ್ಕ ಕಾಲದಲ್ಲಿ ಪಾನನಿರೋಧವನ್ನು ಆಚರಣೆಗೆ ತರತಕ್ಕ ಸಿಬ್ಬಂದಿಗೋಸ್ಕರ ಹಣವನ್ನು ಬಡ್ಜೆಟ್ಟಿನಲ್ಲಿ ಒದಗಿಸಿದ್ದರೂ ಕೂಡ ಮತ್ತೆ ಎರಡೂವರೆ ಲಕ್ಷ ರೂಪಾಯಿಗಳು ಬೇಕು ಎಂದು ಕೇಳುತ್ತಾ ಇದ್ದಾರೆ. ನಿಜವಾಗಿಯೂ, ಈ ಕಾಂಗ್ರೆಸ್ ಸರ್ಕಾರದಲ್ಲಿ ಸ್ವೇಚ್ಛೆಯಾಗಿ, ಒಂದು ಲಗಾಮು ಇಲ್ಲದ ರೀತಿಯಲ್ಲಿ ಹಣವನ್ನು ಖರ್ಚು ಮಾಡತಕ್ಕ ನೀತಿ ಬಹಳ ಕೆಟ್ಟದ್ದು. ಪಾನನಿರೋಧವನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುವುದಕ್ಕೋಸ್ಕರ ಹೆಚ್ಚು ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದಾರೆ. ದೇಶ ತುರ್ತು ಪರಿಸ್ಥಿತಿ ಇರುವ ಕಾಲದಲ್ಲಿ ಒಂದೊಂದು ಕಾಸೂ ಕೂಡ ಲೆಕ್ಕಹಾಕಿ ಉಳಿತಾಯಮಾಡಿ ಖರ್ಚು ಮಾಡುವ ಕಾಲದಲ್ಲಿ ಕುಡುಕರ ನೀತಿಗೋಸ್ಕರ ಹೆಚ್ಚು ಖರ್ಚು ಮಾಡಬೇಕು, ಮತ್ತೆ ಎರಡೂವರೆ ಲಕ್ಷ ರೂಪಾಯಿಗಳು ಬೇಕು ಎಂದು ಹೇಳಿದರೆ ಇದು ನಿಜವಾಗಿಯೂ ಶೋಚನೀಯವಾದ ವಿಚಾರ. ಲಕ್ಷೋಪಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಪಾನನಿರೋಧ ನೀತಿಯನ್ನು ಆಚರಣೆಗೆ ತರುವುದಕ್ಕೆ ಜನತೆಯ ಮೇಲೆ ಹೆಚ್ಚು ಹೆಚ್ಚಾಗಿ ತೆರಿಗೆಯನ್ನು ಹಾಕಿ ಅವರ ಬೆನ್ನು ಮೂಳೆ ಮುರಿಯುವ ಹಾಗೆ ಮಾಡಿದ್ದಾರೆ. ಪಾನನಿರೋಧವನ್ನು ಆಚರಣೆಗೆ ತರುವುದಕ್ಕೆ ಶಕ್ತಿ ಇಲ್ಲದೆ ಇರುವಾಗ ಈ ಕಾಂಗ್ರೆಸ್ ಸರ್ಕಾರದವರಿಗೆ ಒಣ ಪ್ರತಾಪ ಏತಕ್ಕೆ? ಪಾನನಿರೋಧವನ್ನು ದೇಶದಲ್ಲಿ ಆಚರಣೆಗೆ ತರುವುದಕ್ಕೆ ಲಕ್ಷೋಪಲಕ್ಷ ರೂಪಾಯಿಗಳನ್ನು ಖರ್ಚು ಮಾಡುವುದೆಂದರೆ ನಿಜವಾಗಿಯೂ ಕೂಡ ಅದರಿಂದ ನಮ್ಮ ಹಣಕಾಸಿನ ಪರಿಸ್ಥಿತಿ ಕುಂಠಿತವಾಗುತ್ತದೆ. ಆದ್ದರಿಂದ ಅದನ್ನು ಆದಷ್ಟೂ ಜಾಗ್ರತೆಯಾಗಿ ಕೈಬಿಡಲಿಕ್ಕೇ ಬೇಕು. ಇವೊತ್ತಿನ ದಿವಸ ನಮ್ಮ ದೇಶದಲ್ಲಿ ಹಣ ಹೆಚ್ಚಾಗಿ ಬೇಕಾಗಿರತಕ್ಕ ಕಾಲದಲ್ಲಿ ಮಿತವ್ಯಯ ಕೂಡ ಎಷ್ಟೋ ರೂಪದಲ್ಲಿ ಆಗಬೇಕು ಎನ್ನುವ ಕಾಲದಲ್ಲಿ ಸರ್ಕಾರ ದೃಢ ನೀತಿಯನ್ನು ಮುಂದು ಮಾಡಿಕೊಂಡು ಆದಷ್ಟು ಜಾಗ್ರತೆ ಪಾನನಿರೋಧ ಪದ್ಧತಿಯನ್ನು ಖನ್ನ ಮಾಡಿದರೆ ದೇಶಕ್ಕೆ ಎಷ್ಟೋ ಕ್ಷೇಮವಾಗುತ್ತದೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ.

ಈ ಸರ್ಕಾರ ಎಂತೆಂಥ ಕೆಲಸ ಮಾಡಿದೆ, ಹಣ ಬರಬೇಕಾದರೆ, ನಿಮ್ಮ ವ್ಯವಹಾರ ನೋಡಬೇಕಾಗಿದೆ. ಸಣ್ಣ ಪುಟ್ಟ ಕೆಲಸಗಳಿಗೆ ಯಾವುದೋ ಒಂದು ಕೇಸಿನಲ್ಲಿ.........

Sri SANJEEVANATH AIKALA (Suratkal).— On a point of order. Is it possible to have a conference at one end of the Hall. There are three or four persons standing and talking. They are disturbing.

Mr. SPEAKER.—No conferences are allowed. I cannot prohibit members rom talking. But they cannot disturb. No member should disturb another inside the House.

ಶ್ರೀ ಎಸ್. ಶಿವಪ್ಪ.— ಸಭಾಪತಿಯವರೇ ಡಿಮ್ಯಾಂಡ್ ನಂಬರ್ 15 ಮತ್ತು 17 ಎರಡರಲ್ಲೂ ನೋಡಬಹುದು ಸರ್ಕಾರದವರು ಕೇಸುಹಾಕಿ, ಕೋರ್ಟಿಗೆ ಹೋಗಿ ಸಿವಿಲ್ ಸೂಟ್‌ನಲ್ಲಿ ಅವರ ಹಣ

ವನ್ನು ಪಡೆದುಕೊಳ್ಳತಕ್ಕ ಪರಿಸ್ಥಿತಿ ಇದೆ. ಇಂಥಾದ್ದು ಒಂದಲ್ಲ ಎರಡಲ್ಲ ಏಳೆಂಟು ಇವೆ. ಕೋರ್ಟಿಗೆ ಹೋಗುವವರೆಗೂ ಏಕೆ ಬಿಡುತ್ತಾರೆ ? ಸರ್ಕಾರದವರೇ ನ್ಯಾಯಮೂರ್ತಿಗಳಾಗಿರತಕ್ಕವರು ಕೋರ್ಟಿನ ವರೆಗೂ ಹೋಗಲು ಬಿಡದೆ ನಿಮ್ಮಲ್ಲಿಯೇ ಇತ್ಯರ್ಥ ಮಾಡಿಕೊಳ್ಳತಕ್ಕ ಪರಿಸ್ಥಿತಿ ನಿಮ್ಮಲ್ಲಿ ಇಲ್ಲವಲ್ಲಾ ಎಂದು ಪಶ್ಚಾತ್ತಾಪದಿಂದ ಹೇಳುತ್ತಾ ಇದ್ದೇನೆ. ಇದು ಖಂಡಿತವಾಗಿಯೂ ತಪ್ಪು. ಸಣ್ಣ ವಿಷಯಗಳಲ್ಲಿ ಕೋರ್ಟಿಗೆ ಹೋಗಬೇಕೆನ್ನುವುದು ಕೆಟ್ಟ ಪದ್ಧತಿ ಅದನ್ನು ನಿಲ್ಲಿಸಬೇಕೆಂದು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಡಿಮ್ಯಾಂಡ್ ನಂಬರ್ 17ರಲ್ಲಿ ಟೋಕನ್ 100 ರೂಪಾಯಿ ಕೊಡಿ ಎಂದು ಕೇಳಿದ್ದೀರಿ. ಏನೂ ಬೇಕಾದರೂ ಖರ್ಚು ಮಾಡುತ್ತೇವೆ ಎಂದು ಮೊಗುಮ್ಮಾಗಿ ಹೇಳುತ್ತೀರಿ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟದ್ದು ಇದು.

Mr. SPEAKER.— Addressing Sri Sivappa, That is a token. There are funds which will be re-appropriated. This is a new service.

ಶ್ರೀ ಎಸ್. ಶಿವಪ್ಪ.—I agree with you ಮುಂದೆ ಎಷ್ಟು ಖರ್ಚಾಗುತ್ತದೆ ಎಂಬ ಅಂಕಿ ಅಂಶ ಇಲ್ಲ. ಅದಕ್ಕೆ ಟೋಕನ್ ಅಂತ ಅನ್ನುತ್ತಾರೆ. ಮೊದಲೇ ಹೇಳಿದೆ ಸಭಾಪತಿಯವರೇ We are undergoing a national crisis. We have first to resolve that and se austere and economy measures should be adopted. ಇದು ಸಕಾಲವೇ, ಇಂಥಾ ಟೋಕನ್ ಗ್ರಾಂಟು ಕೇಳುವುದು ? 100 ರೂಪಾಯಿ ಟೋಕನ್ ಗ್ರಾಂಟ್ ಕೇಳಿ ವಿದ್ಯಾ ಮಂತ್ರಿಗಳು ಎಷ್ಟು ಬೇಕಾದರೂ ಖರ್ಚು ಮಾಡಲಿ ಎಂದು ಈ ಕಾಲದಲ್ಲಿ ಕೊಡುವುದು ಸರಿಯೇ ಎಂದು ಆರ್ಥಿಕ ಮಂತ್ರಿಗಳನ್ನು ಕೇಳುತ್ತೇನೆ. ಇದು ತಪ್ಪು. ಬೇರೆ ಕಾಲದಲ್ಲಿ ಯೋಜನೆ ಪ್ರಕಾರ ನಡೆಯುತಕ್ಕ ಕಾಲದಲ್ಲಿ ಒಪ್ಪುತ್ತೇನೆ. ಇವತ್ತಿನ ದಿವಸ ನ್ಯಾಷನಲ್ ಎಮರ್ಜೆನ್ಸಿ ಇರುವಾಗ ಒಂದೊಂದು ಕಾಸನ್ನು ಉಳಿತಾಯ ಮಾಡಬೇಕಾದ ಕಾಲದಲ್ಲಿ ಹೊಸದಾಗಿ new service create ಮಾಡಿ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ಟೋಕನ್ ಗ್ರಾಂಟ್ ಕೊಟ್ಟು ಅಪಾರವಾಗಿ ಹಣ ಖರ್ಚುಮಾಡುವುದಕ್ಕೆ ದಾರಿ ಕೊಡುತ್ತೀರಲ್ಲಾ ಇದು ಸರಿಯೇ ಎಂದು ಕೇಳುತ್ತೇನೆ. ವಿದ್ಯಾಭ್ಯಾಸ ಇಲಾಖೆಗೆ ಸಂಬಂಧಪಟ್ಟ ವಿಷಯ ಡಿಮ್ಯಾಂಡ್ ನಂಬರ್ 49ರಲ್ಲಿ ಇನ್ನೊಂದು ಇದೆ. ಈ ರೀತಿ ಒಂದೊಂದು ಕಡೆ ಒಂದೊಂದರಲ್ಲಿ ಕೇಳುತ್ತಿದ್ದೀರಿ. ಈ ಇಲಾಖೆಗೆ ಸಂಬಂಧಪಟ್ಟ ಹಣ ಒಂದೇ ಕಡೆಯಲ್ಲಿ ಇಲ್ಲ. 48ರಲ್ಲಿ establishment of Regional Training College ಅಂತ ಇದೆ. 49ರಲ್ಲಿ ಸಭಾಪತಿಯವರೇ ನಾನು ಕೇಳುತ್ತೇನೆ ವಿದ್ಯಾ ಮಂತ್ರಿಗಳು ಮಾರ್ಚಿ 30 ರೊಳಗೆ ಮೈಸೂರಿನಲ್ಲಿರತಕ್ಕ ಒಂದು ಶಿವರಾತ್ರೀಶ್ವರ ಬೇಸಿಕ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್ ಅಂತ ಅನ್ನುವುದಕ್ಕೆ ನವಜ್ಯೋತಿ ಸ್ಟುಡಿಯೋ ಮಂದಿರವನ್ನು ಕೊಂಡುಕೊಳ್ಳುವುದಕ್ಕೆ ಲಕ್ಷದ 72 ಸಾವಿರ ರೂಪಾಯಿ ಗ್ರಾಂಟ್ ರೂಪದಲ್ಲಿ ಕೊಟ್ಟಿದ್ದಾರೆ. ಯಾವ ಆಧಾರದ ಮೇಲೆ ಕೊಟ್ಟರು ? ಇದು ವಿದ್ಯಾ ಮಂತ್ರಿಗಳ ಛತ್ರವೇ ? ಸರ್ಕಾರದ ಹಣವೇ ? 1 ಲಕ್ಷದ 72 ಸಾವಿರ ರೂಪಾಯಿಗಳನ್ನು ಮಾರ್ಚಿ 31ರ ಒಳಗೆ ಕೊಟ್ಟು ಈ ದಿವಸ ಸಪ್ಲಿಮೆಂಟರಿ ಬಡ್ಜೆಟ್‌ನಲ್ಲಿ ತಂದಿರುವುದು ನೋಡಿದರೆ ವಿದ್ಯಾ ಸಂಸ್ಥೆಯ ಹಣವನ್ನು ಯಾವ ರೀತಿ ಯಾರೋ ಕೆಲವರ ಹಿತಕ್ಕೆ ಹಣ ಬಳಸಲು ಮನಸ್ಸು ಕೊಟ್ಟಿದ್ದಾರೆ ಎಂಬುದು ಬಹಳ ಶೋಚನೀಯ. ಇಂಥಾ ವಿಚಾರದಲ್ಲಿ ಮೊದಲೇ ಹೇಳಿದ ಹಾಗೆ ನಮ್ಮ ಕಡೆಯಲ್ಲಿರತಕ್ಕ ಎಲ್ಲ ಸದಸ್ಯರು ಏಕಕಂಠದಿಂದ, ಏಕವಾಣಿಯಿಂದ ಹೇಳಿದ್ದೇವೆ, ನಿಮಗೆ ಸರ್ವಸಹಕಾರ ಕೊಡುತ್ತೇವೆ. ದೇಶದ ಒಂದು ಸಂಕಟ ಪರಿಸ್ಥಿತಿಯನ್ನು ಎದುರಿಸುವಾಗ ಎಷ್ಟೇ ಕಷ್ಟವಾದರೂ ಕೂಡ ತಯಾರಾಗಿದ್ದೇವೆ, ಎಲ್ಲರ ಸರ್ವಶಕ್ತಿಯನ್ನೂ ನಿವೇದನೆ ಮಾಡುತ್ತೇವೆ ಎಂದು ಹೇಳಿದ್ದೇವೆ. ನಮ್ಮೆಲ್ಲರ ಸಹಕಾರ ತೆಗೆದುಕೊಂಡು ಮಿತವ್ಯಯ ಮಾಡತಕ್ಕ ಕಾರ್ಯ ಮಾಡಲಿಲ್ಲವಲ್ಲಾ, ಅದಕ್ಕೆ ಕೈಹಾಕಲಿಲ್ಲವಲ್ಲಾ, ಇನ್ನು ಹಳೆಯ ರೀತಿಯಲ್ಲೇ ಹೆಚ್ಚು ಹೆಚ್ಚು ಹಣ ಖರ್ಚುಮಾಡತಕ್ಕ ರೀತಿಯಲ್ಲಿ ಹೋಗುತ್ತಾ ಇದ್ದೀರಲ್ಲಾ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಡಿಮ್ಯಾಂಡ್ ನಂಬರ್ 20ರಲ್ಲಿ ಮೀನು ಹಿಡಿಯುವುದಕ್ಕೆ nets ತೆಗೆದುಕೊಳ್ಳುವುದಕ್ಕೆ ದುಡ್ಡು ಕೊಟ್ಟಿದ್ದೀರಿ.

Mr. SPEAKER.—That is boat building loan.

Sri S. SIVAPPA.—Even for finishing nets, hooks, etc. "Additional sums are required to complete the target of 28 boats for supply to the 80 fishermen...........the construction of these boats on subsidy *cum* loan basis. ಅವರಿಗೆ ಬೇಕಾದವರಾದರೆ ಸಬ್ಸಿಡಿ ಬೇಕಿಲ್ಲದವರಾದರೆ ಲೋನು ಇದು ಬಹಳ ಮೋಗಮ್ಮಾಗಿದೆ. ಬಹಳ ಚೆನ್ನಾಗಿದೆ. ಫಿಷರೀ ಡೆವಲಪ್‌ಮೆಂಟ್ ವಿಷಯ ಹೊಸದಲ್ಲ 3 ಅಥವಾ 5 ವರ್ಷದ ಪ್ಲಾನ್ ಹಾಕಿದ್ದೀರಿ. ಅದು ಫಿಷರೀ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಹಾಗಿರುವಾಗ ಈ ದಿವಸ ಸಪ್ಲಿಮೆಂಟರಿ ಗ್ರಾಂಟು ಕೇಳತಕ್ಕ ಅವಶ್ಯಕತೆ ಏನಿತ್ತು ? ಆತುರ ಆತುರವಾಗಿ ಬರತಕ್ಕ ವಿಷಯ ಖಂಡಿತವಾಗಿಯೂ ಅಲ್ಲ.

Mr. SPEAKER.—If the Centre gives loan ?

Sri S. SIVAPPA.—Sir, the whole economy of our State is an integrated budget, because the Central and State grants are all integrated. But in the Plan it is provided that Centre gives so much. Expecting that, they should provide in the Budget. Usually, the Central grants come in the middle of the year. That they should anticipate well in advance. Therefore, I say that these people have no sense of planning. This is haphazard. In planning, there should be a system and method of budgetting. Otherwise, there will be confusion. ಫಿಷರೀಸ್‌ಗೂ ಹೈಸ್ಕೂಲು ಸ್ಥಾಪನೆ ಮಾಡುವುದಕ್ಕೂ ಏನು ಸಂಬಂಧ. ಸರ್ಕಾರದ ನೀತಿ ಸಿಸ್ಟಮ್ಯಾಟಿಕ್ಕಾಗಿಲ್ಲ ಎಂದು ಪದೇ ಪದೇ ಹೇಳುತ್ತಿದ್ದರೂ ಗೋರ್ಕಲ್ಲಮೇಲೆ ಮಳೆ ಸುರಿದ

(SRI S. SIVAPPA)

ಹಾಗೆ ಆಗಿದೆ. ನಾವು ಹೇಳಿದರೆ ಹೇಳಿಕೊಳ್ಳಲಿ ಎಂದು ಉದಾಸೀನದಿಂದಿರುವಂತೆ ಕಾಣುತ್ತದೆ; ಇರಲಿ, ಬಹಳ ದಿವಸ ಹೀಗಿರುವುದಿಲ್ಲ.

2-30 P.M.

24ನೆಯ ಡಿಮ್ಯಾಂಡಿನಲ್ಲಿ 72, 68, 100 ರೂಪಾಯಿಗಳನ್ನು ಕೇಳಿದ್ದಾರೆ, ಮಿನರಲ್ ಡೆವಲಪ್‌ಮೆಂಟ್ ಬೋರ್ಡ್ ಕೆಲಸ ಇತ್ಯಾದಿಗೆ ಹಣಬೇಕೆಂದು ಕೇಳಿದ್ದಾರೆ. ಈ ಬೋರ್ಡಿನ ಹಣಕಾಸಿನ ಪರಿಸ್ಥಿತಿ ನೋಡಿದರೆ ಮೊದಲು ಇದಕ್ಕೆ 25 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೆವು. ಅದು ಸಾಲದೆಂದು ಅದಕ್ಕೆ ಮೂರರಷ್ಟು ಅಂದರೆ 60 ಲಕ್ಷ ರೂಪಾಯಿಗಳು ಬೇಕೆಂದು ಈ ದಿವಸ ಕೇಳುವುದನ್ನು ನೋಡಿ ಆಶ್ಚರ್ಯವಾಗುತ್ತಿದೆ. ಮೊದಲೇನು ಗುರಿಯಿತ್ತೋ ಅದರ ನಾಲ್ಕರಷ್ಟು ಕೆಲಸ ಅನಿರೀಕ್ಷಿತವಾಗಿ ಇದ್ದಕ್ಕಿದ್ದ ಹಾಗೆ ಹೇಗೆ ಬಂತು ? ಇದನ್ನು ಸರಿಯಾದ ಬಡ್ಜೆಟ್ ಎಂದು ಹೇಗೆ ಪರಿಗಣಿಸುವುದು ಎಂದು ಕೇಳಬೇಕಾಗಿದೆ. ಮೊದಲು 10 ಕೋಟಿ ಒದಗಿಸಿ ಸಾಲುವುದಿಲ್ಲ, 20 ಲಕ್ಷ ಬೇಕು ಎಂದು ಕೇಳಿದರೆ ಅರ್ಥವಾಗುತ್ತದೆ, ಒಪ್ಪಬಹುದು ಅದುಬಿಟ್ಟು ಒರಿಜಿನಲ್ ಬಡ್ಜೆಟ್ಟಿನ ಮೂರರಷ್ಟು ಬೇಕೆಂದರೆ ಸರ್ಕಾರದ ನೀತಿಯೇನು ಎಂದು ನಾವು ಪರೀಕ್ಷಿಸಬೇಕಾಗುತ್ತದೆ. ಹೀಗೆ ರೀತಿ ನೀತಿಯಿಲ್ಲದೆ ಹಣ ಕೇಳುತ್ತಿದ್ದೀರಿ. ಈ 60 ಲಕ್ಷ ಏಕೆ, ಯಾವ ರೀತಿ ಖರ್ಚುಮಾಡಲಾಗುವುದು ಎಂದು ಸರಿಯಾಗಿ ಹೇಳಿಲ್ಲ. ಕಬ್ಬಿಣದ ಅದರನ್ನು ಹೆಚ್ಚಾಗಿ ರಫ್ತು ಮಾಡಬೇಕಾಗಿದೆ, ಆದಕ್ಕೆ ಹಣ ಹೆಚ್ಚಾಗಿ ಬೇಕು ಎಂದು ಸೂಚಿಸಿದ್ದಾರೆ. ಈ ಬಾಬಿನಿಂದ ಸಂಪಾದನೆಯಾಗಬಹುದೆಂದು ನಿರೀಕ್ಷಿಸುತ್ತಿರುವಾಗ ಖರ್ಚು ಹೆಚ್ಚಾಗಿದೆ ಇದು ವಿಷಾದಕರವಾದುದು. ಈ ಬೋರ್ಡಿಗಾಗಿ ನೂರಾರು ಲಾರಿಗಳನ್ನು ಕೊಂಡಿದ್ದು ಅವನ್ನು ಯಾರಿಗೋ ಮಾರುವುದರಲ್ಲಿದ್ದಾರೆಂದು ಈಚೆಗೆ ಕೇಳಿದೆ. ಹೀಗೆ ಮಾಡಿ ತಮ್ಮ ಕೈಲಿ ನಡೆಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬೇಕೆಂದಿದ್ದಾರೋ ಏನೋ. ನಾವು ಕೊಟ್ಟ ಲಕ್ಷಗಟ್ಟಲೆ ಹಣ ಲಾರಿಗಳಿಗೆ ಕೊಟ್ಟು ಸರಿಯಾಗಿ ಸ್ಕೀಂ ಮಾಡದೆ, ವ್ಯವಸ್ಥೆ ಮಾಡದೆ ಹೆಚ್ಚು ಹಣ ಕೇಳುವುದು ಸರಿಯಾದ ಆರ್ಥಿಕ ನೀತಿಯಲ್ಲ, ದೇಶಕ್ಕೆ ಅಪಾಯಕಾರಿ ಎಂದು ಹೇಳುತ್ತೇನೆ.

ಸೊಗಸುಗಾರ ಪುಟ್ಟಸ್ವಾಮಿ ಎಂದು ಹೇಳುವ ಹಾಗಿರುವ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಎಂಪೋರಿಯಂಗಾಗಿ 9,08,100 ರೂಪಾಯಿಗಳನ್ನು ಕೇಳಿದ್ದಾರೆ. ಇದೇ ರೀತಿ ಮೈಸೂರಿನಲ್ಲಿರುವ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿಗೆ 3,60,000 ರೂಪಾಯಿಗಳ ಬೇಡಿಕೆಯಿದೆ. ಷೋರೂಂ ಮಾಡಲು, ಇಂಥ ವಿಶೇಷ ಪರಿಸ್ಥಿತಿಯಲ್ಲಿ ಹೆಚ್ಚು ಖರ್ಚುಮಾಡಬಾರದೆಂದು ಹೇಳುವಾಗ, ಬೆಂಗಳೂರು ಪೇಟೆಯಲ್ಲಿ ಜಾರ್ಜೆಟ್ ಸೀರೆ ದರಿಸಿದ ಹೆಂಗಸರ ಒಂದು ಸಮಿತಿ ರಚಿಸಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಅದರ ಅಕ್ಟಿವಿಟೀಸ್ ಮಾನ್ಯ ಸದಸ್ಯರಿಗೆ ತಿಳಿದಿದ್ದರೆ ಚೆನ್ನಾಗಿತ್ತು. 1957-58 ರಲ್ಲಿ ಎಂಪೋರಿಯಂ ಮುಚ್ಚುವ ಪರಿಸ್ಥಿತಿ ಇತ್ತು. ದುರ್ವ್ಯಯವಾಗುತ್ತಿದೆ, ನಡೆಸಲು ಸಾಧ್ಯವಿಲ್ಲವೆಂದು ತಿಳಿದು ಬಂದಾಗ ಹೆಣ್ಣುಮಕ್ಕಳು ಮುಂದೆ ಬಂದು ತಾವು ನಡೆಸುವುದಾಗಿ ಹೇಳಿದರು. ಆಗ ಒಂದು ಸಮಿತಿ ಮಾಡಿದೆವು. ಅದಾದಮೇಲೆ ಪ್ರತಿ ತಿಂಗಳೂ ಒಂದು ಲಕ್ಷ ರೂಪಾಯಿಗಳ ವಸ್ತುಗಳು ಮಾರಾಟವಾಗಿವೆ. ಈ ದಿವಸ ನಮ್ಮ ದೇಶದಲ್ಲಿ ಹ್ಯಾಂಡ್ ಕ್ರಾಫ್ಟ್ಸ್, ಹ್ಯಾಂಡ್‌ಲೂಮ್ ಮುಂತಾದ ಉದ್ಯಮಗಳಲ್ಲಿ ತೊಡಗಿರುವವರು ಇಲ್ಲಿ ಮಾಡಿರುವುದಕ್ಕಿಂತ ಉತ್ತಮವಾದ ಅರೇಂಜ್‌ಮೆಂಟ್ ಮಾಡಲು ಸಾಧ್ಯವಿಲ್ಲ. ಮುಂದೆ ಬಂದಿರುವ ಸ್ತ್ರೀಯರಿಗೆ ಯಾವ ವೇತನವನ್ನಾಗಲಿ ಅಥವಾ ರೆಮ್ಯೂನರೇಷನ್ ಆಗಲಿ ಕೊಡುತ್ತಿಲ್ಲ. ಅವರು ತಮ್ಮ ಮನೆಗಳಲ್ಲಿ ಊಟ ಮಾಡಿಕೊಂಡು ಬಂದು ಕೆಲಸಮಾಡುತ್ತಿದ್ದಾರೆ. ಯಾವ ಟೂರಿಸ್ಟ್ ಬೆಂಗಳೂರಿಗೆ ಬಂದರೂ ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಎಂಪೋರಿಯಂಗೆ ಹೋಗದೆ ಇರುವುದಿಲ್ಲ. ಈಗ ಕೇಳಿರುವ ಹಣ ಷೋರೂಂ ಮಾಡಿ ವೃಥಾ ಖರ್ಚು ಮಾಡುವುದಕ್ಕಲ್ಲ. ಹೆಚ್ಚು ಪ್ರೊಡ್ಯೂಸ್ ಮಾಡುವುದಕ್ಕೆ ಬಂಡವಾಳ ಸಾಲದು, ಹೆಚ್ಚಾಗಿ ಬೇಕಾಗಿದೆ. ನಮ್ಮ ಮೇಲೆ ಲಯಬಲಿಟಿ ಇಲ್ಲ. ಪ್ರತಿ ವರ್ಷ ಆದಾಯ ಬರುತ್ತಿದೆ. ಹೆಣ್ಣು ಮಕ್ಕಳು ಈ ಸಂಬಂಧದಲ್ಲಿ ದೊಡ್ಡ ಉಪಕಾರ ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ತಿಳಿಯಬೇಕಾದ್ದು ಅವಶ್ಯಕ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ವಿಚಾರ ಸರಿಯಾಗಿ ತಿಳಿಯದಿದ್ದರೆ ಚರ್ಚೆ ಸರಿಯಾಗಿರುವುದಿಲ್ಲ. ಹಿಂದೆ ನಾನ್‌ಅಫಿಷಿಯಲ್ಸ್ ಕೆಲಸಮಾಡುತ್ತಿದ್ದರು. ಈಗ ಸರ್ಕಾರದವರು ವಹಿಸಿಕೊಂಡಿದ್ದಾರೆ. ಅದಕ್ಕಾಗಿ ಹಣಬೇಕೆಂದು ಕೇಳಿದ್ದಾರೆ. ಅದರ ವಿಚಾರ ಬಿಟ್ಟು ಈಗ ಬೇರೆ ಚರ್ಚೆ ನಡೆದಿದೆ.

ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೆ, ಈಗತಾನೆ ನಾನು ಹೇಳಿದ್ದೇ ನಿಜವಾಯಿತು. ಲೋಕೋಪಯೋಗಿ ಖಾತೆಯ ಮಂತ್ರಿಗಳು ನಾನ್ ಅಫಿಷಿಯಲ್ಸ್ ಕೆಲಸ ಮಾಡುತ್ತಿದ್ದಾರೆ, ಉಚಿತವಾಗಿ ಕೆಲಸ ಮಾಡಲು ಮಹಿಳೆಯರು ಮುಂದೆ ಬಂದಿದ್ದಾರೆ ಎಂದು ಹೇಳಿದರು. ಆದರೆ ಹಣಕಾಸಿನ ಸಚಿವರು ಸರ್ಕಾರದವರೇ ವಹಿಸಿಕೊಂಡಿದ್ದಾರೆ, ಪೂರ್ಣವಾಗಿ ಸರ್ಕಾರ ವಹಿಸಿಕೊಳ್ಳಬೇಕಾಗಿ ಬಂದುದರಿಂದ ಇಷ್ಟು ಹಣ ಬೇಕು ಎಂದು ಹೇಳಿದರು. ಇದು ಒಂದಕ್ಕೊಂದಕ್ಕೆ ವ್ಯತಿರಿಕ್ತವಾಗಿದೆ. ಈ ವಿಚಾರವಾಗಿ ಹೆಚ್ಚು ಹೇಳುವುದಿಲ್ಲ. ಚೆನ್ನಾಗಿ ಸಂಪಾದನೆಯಾಗುತ್ತಿದ್ದರೆ ಪುನಃ ಇಷ್ಟು ಹೆಚ್ಚುಹಣ ಕೇಳುತ್ತಿರಲಿಲ್ಲ. ಈ ದಿವಸ ಇದರ ಮೆರಿಟ್ ಏನು, ಇದನ್ನು ಯಾವದೃಷ್ಟಿಯಿಂದ ನೋಡಬೇಕು ಎಂಬುದನ್ನು ಗಮನಿಸಬೇಕಾದ್ದು ಆವಶ್ಯಕ ನಾವು ಒಂದು ಕಷ್ಟಕಾಲದಲ್ಲಿರುವಾಗ, ಮಿತವ್ಯಯ ಮಾಡಬೇಕೆಂದು ಅರ್ಥ ಸಚಿವರು ಮೇಲೆ ಮೇಲೆ ಹೇಳುವಾಗ ಇಂಥ ಬಾಬುಗಳಿಗೆ ಹತ್ತಾರು ಲಕ್ಷ ಈಗ ಕೊಡುವುದು ಸರಿಯೆ ಎಂಬುದು ಮುಖ್ಯ ಪ್ರಶ್ನೆ. ಹೇಗೆ ಕೆಲಸಮಾಡುತ್ತಿದೆ ಎಂಬ ವಿಚಾರ ಬೇರೆ. ಈಗಿನ ತುರ್ತು ಪರಿಸ್ಥಿತಿಯಲ್ಲಿ ಇಂಥ ವ್ಯವಹಾರಗಳಿಗೆ ಹತ್ತಾರು ಲಕ್ಷ ಬಂಡವಾಳ ಕೊಡುವ ಆವಶ್ಯಕತೆಯಿದೆಯೆ ಎಂದು ಈ ದಿವಸ ತಮ್ಮ ಮುಂದೆ ಕೇಳಬೇಕಾಗಿದೆ. ಹೀಗೆ ಈರೀತಿ ಬಹಳ ಅತ್ಯಾವಶ್ಯಕವಾಗಿಲ್ಲದಿರುವ ಬಾಬುಗಳಿಗೆ ಕೊಡಲು ನಮ್ಮಲ್ಲಿ ಹಣ ಇದೆಯೆ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ಹಾಗಿದ್ದರೂ ಕೂಡ ಈ ದಿವಸ ದೇಶದಲ್ಲಿ ಬಡ ರೈತರು ಮತ್ತು ಜನರ ಮೇಲೆ ತೆರಿಗೆ ಹೊರೆ ಏಕೆ ಹಾಕುವುದು ? ಅಂಥ ಆವಶ್ಯಕತೆಯಿಲ್ಲದಿರುವಾಗ ಬಹಳ ಒತ್ತಾಯವಾಗಿ ತೆರಿಗೆ ಏಕೆ ಹಾಕಬೇಕಾಗಿತ್ತು ? ಇಂಥ ವಿಚಾ

ರಕ್ಕೆ ಕೈ ಹಾಕುವಾಗ ಎರಡು ಸಾರಿ ಯೋಚನೆ ಮಾಡಬೇಕಾಗಿದೆ, ಸ್ವಾಮಿ, ಈ ದಿವಸ ಮಿತವ್ಯಯ ಎಂದು ಏನು ಹೇಳುತ್ತಿದ್ದಾರೋ ಅದಕ್ಕೆ ವಿರೋಧವಾಗಿ ನಡೆಯುತ್ತಿದೆ. ಒಂದು ಕಡೆ ಅನಾವಶ್ಯಕವಾಗಿರುವುದನ್ನೆಲ್ಲಾ ರಿಟ್ರೆಂಚ್ ಮಾಡುತ್ತೇವೆಂದು ಹೇಳುತ್ತಾ ಇನ್ನೊಂದು ಕಡೆ ಹೊಸದಾಗಿ ಪಬ್ಲಿಕ್ ವರ್ಕ್ಸ್ ಡಿವಿಜನ್‍ಗಳನ್ನೂ ಸರ್ಕಲ್‍ಗಳನ್ನೂ ಮಾಡುತ್ತಿದ್ದಾರೆ. ಕಿಬ್ಬನಹಳ್ಳಿ-ಹುಲಿಯೂರು-ಯಳಂದೂರು ರಸ್ತೆ ಮತ್ತು ಬಾಣಸಂದ್ರ-ಹಾಸನ-ಮಂಗಳೂರು ರಸ್ತೆಗಳ ಸಂಬಂಧವಾಗಿ ಹೊಸದಾಗಿ Special ore roads circle ಎಂದು ಒಂದು ಸರ್ಕಲ್ಲನ್ನೇ ಮಾಡುತ್ತಿದ್ದಾರೆ. ಇದಕ್ಕೆ ಸೇರಿದಂತೆ ನಾಲ್ಕು ಡಿವಿಜನ್‍ಗಳನ್ನು ಮಾಡುತ್ತಿದ್ದಾರೆ. ಹೀಗೆ ಸಿಕ್ಕಪಟ್ಟೆ ಹೆಚ್ಚು ಮಾಡುತ್ತಿದ್ದಾರೆ. ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಆದರೆ ಒಂದು ರಸ್ತೆ ಮಾಡಿ ಎಂದು ಕೇಳಿದರೆ ಅದಕ್ಕೆ ಹಣವಿಲ್ಲವೆಂದು ಹೇಳುತ್ತಾರೆ. ನಾನು ಹೇಳ ವುದನ್ನು ಮಂತ್ರಿಗಳು ಸಮಾಧಾನದಿಂದ ಕೇಳಬೇಕು. ನಮಗೆ ore carrying roads ಗಾಗಿ ನಾಲ್ಕುವರೆ ಕೋಟಿ ರೂಪಾಯಿ ಬಂದಿದೆ ಎಂದು ಹೇಳುತ್ತಾರೆ. ಇದನ್ನು ಖರ್ಚು ಮಾಡಿ ಹೊಸ ಹೊಸ ಡಿವಿಜನ್‍ಗಳನ್ನು ಮಾಡುವುದಕ್ಕೆ ಬದಲು ಈ ಹಣವನ್ನು ಉಳಿತಾಯ ಮಾಡಿ ಯಾವುದಾದರೂ ಬೇರೆ ರಸ್ತೆಗಳಿಗೆ ಕೊಡಬಹುದಾಗಿತ್ತು. ಬೇರೆ ಅಗತ್ಯವಾದ ರಸ್ತೆ ಮಾಡಿ ಎಂದು ಕೇಳಿದರೆ 'ನಮ್ಮಲ್ಲಿ ಹಣವಿಲ್ಲ' ಎಂದು ಹೇಳುತ್ತಾರೆ.........

Sri K. PUTTASWAMY (Minister for Municipal Administration).—May I request the leader of the opposition to show us the Courtesy of yielding for a minute ?

Sri S. SIVAPPA.—I am not yielding. ಅಲ್ಲಿ ಹಾಸನ ಮತ್ತು ಮಂಗಳೂರಿನಲ್ಲಿ ಡಿವಿಜನ್‍ಗಳನ್ನು create ಮಾಡಿದರು ; ಶರಾವತಿ ವಿಚಾರ ನೋಡಿದರೆ, ಅಲ್ಲಿ ಪುನಃ ಎರಡು ಡಿವಿಜನ್‍ಗಳನ್ನು ಮಾಡಿದ್ದಾರೆ. Rehablitation ಗೆ ಲಕ್ಷಗಟ್ಟಲೆ ಹಣ ಕೇಳುತ್ತಿದ್ದಾರೆ. ಇದು ಆರ್ಥಿಕ ಮಿತವ್ಯಯ ಮಾಡತಕ್ಕ ರೀತಿಯೆ ಎಂದು ಪಬ್ಲಿಕ್ ವರ್ಕ್ಸ್ ಮಂತ್ರಿಗಳನ್ನು ಕೇಳುತ್ತೇನೆ. ರಸ್ತೆ ಬೇಕೆಂದು ಮೊನ್ನೆತಾನೆ ಕೇಳಿದುದಕ್ಕೆ ಹಣವಿಲ್ಲವೆಂದು ಹೇಳಿದ್ದಾರೆ ಹೀಗಿರುವಾಗ ಸಿಬ್ಬಂದಿಗಾಗಿ ಲಕ್ಷಗಟ್ಟಲೆ ಹಣವನ್ನು ಖರ್ಚು ಮಾಡುತ್ತಿದ್ದಾರೆ, ಇದು ಸರಿಯಾದ ಆರ್ಥಿಕನೀತಿಯೇ ? ಇದು ಖಂಡಿತವಾಗಿಯೂ ಒಳ್ಳೆಯನೀತಿಯಲ್ಲವೆಂದು ಹೇಳಬೇಕಾಗಿದೆ. ಕಟ್ಟಡಗಳಿಗೆ, ರಸ್ತೆಗಳಿಗೆ ಹಣವಿಲ್ಲ, ದೇಶದಲ್ಲಿ ಮಿತವ್ಯಯ ಕ್ರಮವನ್ನು ಹಾಕಬೇಕೆಂದು ಹೇಳುವಾಗ, 48 ನೆಯ ಡಿಮ್ಯಾಂಡಿನಲ್ಲಿ ಮೈಸೂರಿನಲ್ಲಿ ರೀಜನಲ್ ಟ್ರೈನಿಂಗ್ ಕಾಲೇಜಿಗಾಗಿ 21,15,100 ರೂಪಾಯಿ ಕೇಳಿದ್ದಾರೆ. "This is a new item of expenditure which was not contemplated at the time of the preparation of the Budget Estimates for the current year etc" ಎಂದು ಹೇಳಿ ಇದಕ್ಕಾಗಿ ಐದು ಲಕ್ಷ ರೂಪಾಯಿ ಈಗಾಗಲೇ ಕೊಟ್ಟಿದೆಯೆಂದು ಹೇಳಿದ್ದಾರೆ. 49ನೆಯ ಡಿಮ್ಯಾಂಡಿನಲ್ಲಿ, ಶಿವರಾತ್ರೀಶ್ವರ ಬೇಸಿಕ್ ಟ್ರೈನಿಂಗ್ ಇನ್‍ಸ್ಟಿಟ್ಯೂಟ್‍ಗೆ ನವಜ್ಯೋತಿ ಸ್ಟುಡಿಯೋವನ್ನು ಕೊಂಡುಕೊಳ್ಳಲು 1,72,000 ರೂಪಾಯಿ ಕೊಟ್ಟಿದ್ದಾರೆ. ಒಂದು ಖಾಸಗಿ ಸಂಸ್ಥೆಗೆ ಇಷ್ಟು ದೊಡ್ಡ ಮೊಬಲಗನ್ನು ಯಾವ ಆಧಾರದ ಮೇಲೆ, ಯಾವ ನೀತಿಯ ಮೇಲೆ ಕೊಟ್ಟರು ಎಂದು ನಾನು ಕೇಳಬೇಕಾಗಿದೆ. ಇಷ್ಟು ಹಣಕ್ಕೆ ಯಾರು ಜವಾಬ್ದಾರರೆಂದು ಗೊತ್ತು ಮಾಡಬೇಕಾಗಿದೆ. ಒಂದೊಂದು ಹಳ್ಳಿಯಲ್ಲಿ ಸ್ಕೂಲು ಬೇಕಾಗಿದೆಯೆಂದು ಕೇಳಿದರೆ, ಅದನ್ನು ಕೊಡಬೇಕಾದರೆ ಹಳ್ಳಿಯ ಜನರು 1800 ರೂಪಾಯಿ ಕೊಡಬೇಕು, ಇಲ್ಲದಿದ್ದರೆ ಕೊಡುವುದಿಲ್ಲವೆಂದು ಹೇಳುತ್ತಾರೆ. ಹೀಗಿರುವಾಗ ಯಾವುದೋ ಒಂದು ಮಠದ ಅಧೀನದಲ್ಲಿ ಇದು ನಡೆಯುತ್ತಿದೆಯೆ ಂದು ಸರ್ಕಾರದ ಬೊಕ್ಕಸದಿಂದ 1,72,000 ರೂಪಾಯಿಗಳನ್ನು ವಿದ್ಯಾ ಮಂತ್ರಿಗಳು ಕೊಟ್ಟರು ಎಂದರೆ, ಇದು ನಿಜವಾಗಿಯೂ ವಿಷಾದಕರವಾದ ವಿಚಾರ. ಇದನ್ನು ಯಾರನ್ನು ಕೇಳಿ ಕೇಳಿ ಕೊಟ್ಟರು, ಶಾಸನ ಸಭೆಯ ಮುಂದೆ ತಂದರೆ ? ಈಗ ಅರ್ಥಸಚಿವರು 4,57,42,905 ರೂಪಾಯಿಗಳಿಗೆ ಸಪ್ಲಿಮೆಂಟರಿ ಡಿಮ್ಯಾಂಡನ್ನು ನಮ್ಮ ಮುಂದೆ ಮಂಡಿಸಿದ್ದಾರೆ ಈ ಹಣವನ್ನು ಬಜೆಟ್ ಮಾಡತಕ್ಕ ಕಾಲದಲ್ಲೇ, ನಿರೀಕ್ಷೆಮಾಡಿ, ಅದರಲ್ಲಿ ಸೇರಿಸಬಹುದಾಗಿತ್ತು, ಅದನ್ನು ಮಾಡದೆ ಹಟಾತ್ತನೆ ಈ ಡಿಮ್ಯಾಂಡುಗಳನ್ನು ನಮ್ಮ ಮುಂದೆ ತಂದು ನಾನಾಕಾರಣಗಳನ್ನು ಹೇಳುತ್ತಿದ್ದಾರೆ. ಇದು ಆರ್ಥಿಕ ನೀತಿ ಬಾಹಿರವಾಗಿದೆ. ತುರ್ತುಪರಿಸ್ಥಿತಿಯಲ್ಲಿ, ಈ ಯುದ್ಧ ಕಾಲದಲ್ಲಿ, ಜನರನ್ನು ಹೇಗೆ ತರಪೇತು ಮಾಡಬೇಕೆಂಬ ಬಗ್ಗೆ ಯೋಚಿಸಿ ಆ ಬಗ್ಗೆ ಯಾವ ಕೆಲಸಗಳನ್ನು ಇದರಲ್ಲಿ ತೋರಿಸಿಲ್ಲ. ಚೀಣೀ ದುರಾಕ್ರಮಣನಡೆದಿದೆ, ಇದನ್ನೆದುರಿಸಿ ಯಶಸ್ವಿಯಾಗಲು ನಮ್ಮ ದೇಶದ ಸಂಪತ್ತೆಲ್ಲವನ್ನು ವಿನಿಯೋಗ ಮಾಡಲು ಸಿದ್ಧರಿದ್ದೇವೆಂದು ಕರತಾಡನ ಮಾಡಿ ಒಪ್ಪಿದ್ದೇವೆ. ಈ ವಿಷಯಕ್ಕೆ ಸಂಬಂಧಪಟ್ಟದ್ದು ಯಾವುದೂ ಇದರಲ್ಲಿ ಇಲ್ಲ. ಹೀಗಿರುವಾಗ ಬೇರೆ ಬೇರೆ ಬಾಬುಗಳಿಗೆ ಐದು ಕೋಟಿ ರೂಪಾಯಿ ಹೆಚ್ಚು ಖರ್ಚು ಮಾಡಲು ಕೊಡಿ ಎಂದು ಹೇಳಿದರೆ, ಇದು ನಮ್ಮ ಆರ್ಥಿಕ ನೀತಿಗೇ ವಿರೋಧವಾಗಿದೆ. ಬಹಳ ಶೋಚನೀಯವಾದುದು. ಯುದ್ಧಕ್ಕೆ ಸಹಾಯಕವಾದ ಒಂದು ಬಾಬೂ ಇದರಲ್ಲಿಲ್ಲ. 39 ನೆಯ ಬೇಡಿಕೆಯಲ್ಲಿ ಸಿವಿಲ್ ಡಿಫೆನ್ಸ್‍ಗೆ 50 ಸಾವಿರ ಮಾತ್ರ ಕೇಳಿದ್ದಾರೆ. ಮಿಕ್ಕ ನಾಲ್ಕೂವರೆ ಕೋಟಿ ಬೇರೆ ಬೇರೆ ಬಾಬುಗಳಿಗೆ ಸಂಬಂಧಪಟ್ಟದ್ದು. ಮೈನರ್ ನೀರಾವರಿಗೆ ಒಂದು ಕೋಟಿ ರೂಪಾಯಿ ವಿನಿಯೋಗ ಮಾಡುತ್ತೇವೆ, ಇದರಿಂದ ಆಹಾರೋತ್ಪತ್ತಿಗೆ ಸಹಾಯವಾಗುತ್ತದೆ, ಎಂದು ಹೇಳಬಹುದು. ದೆಹಲಿಗೆ ಹೋದಾಗ ಹದಿನೈದು ಸಾವಿರ ಬಾವಿಗಳಿಗೆ ಅವರು ಹಣ ಕೊಟ್ಟಿದ್ದಾರೆ, ಇಲ್ಲಿ 94 ಲಕ್ಷ ರೂಪಾಯಿ ಒದಗಿಸಿದ್ದೇವೆ ಎಂದು ಹೇಳಿದರು, ಇದು ಶ್ಲಾಘನೀಯವಾದುದು ; ಆಹಾರೋತ್ಪತ್ತಿಗೆ ಸಂಬಂಧಪಟ್ಟದ್ದು. ಇಂಥ ಕೆಲಸ ಮಾಡತಕ್ಕ ಕಾಲದಲ್ಲಿ ನಮ್ಮ ತರುಣ ರೆವಿನ್ಯೂ ಮಂತ್ರಿಗಳು, ಈ ಸೌಲಭ್ಯ ರೈತನಿಗೆ ತಲಪುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು, ಒಂದುವೇಳೆ ಎಷ್ಟೋ ಹಣವನ್ನು ಸರ್ಕಾರದವರು ಕೊಟ್ಟು ಬಡ ರೈತರ ನಿರ್ಬಂಧದಿಂದಲಾದರೂ ತಮ್ಮ ಊರಿಗೆ ಬಾವಿಗಳನ್ನು ತೆಗೆಯಬೇಕೆಂದರೂ ಕೆಲವಾರು ಜನಗಳು, ಹಣವಂತರು ಅಧಿಕಾರಿಗಳನ್ನೇ ಹೆದರಿಸಿ ಎಷ್ಟೋ ಬಾವಿಗಳನ್ನು ತಮ್ಮ ಊರುಗಳಿಗೆ ಮಂಜೂರು ಮಾಡಿಸಿ ಕೊಂಡಿದ್ದಾರೆ. ಇದರಿಂದ ನಿಜವಾಗಿ ಬಡವ ಸಾಕಷ್ಟು ಹಣವನ್ನು ಸರ್ಕಾರದಿಂದ ಪಡೆಯದೆ ತೊಂದರೆ ಪಡುತ್ತಾನೆ. ಈ ರೀತಿ ಸರ್ಕಾರದಲ್ಲಿ ಬಡ ರೈತನಿಗೆ ದುಡ್ಡು ಸಿಗದೆ ಆತ ಮೋಸ ಹೋಗಬಾರದು.

(SRI S. SIVAPPA)

ಇನ್ನು ಫ್ಲಡ್ ರಿಲೀಫ್ ಗೋಸ್ಕರ 10 ಲಕ್ಷ ರೂಪಾಯಿಗಳು ಮಂಜೂರಾಗಿವೆಯೆಂದು ಹೇಳಿದ್ದೀರಿ. ಈ ಬಾಬಿಗೆ ಕೊಡುವ ಹಣವನ್ನು ಹಂಚುವ ಕಾಲದಲ್ಲಿ ನನ್ನ ಜಿಲ್ಲೆಯ ವಿಷಯವಾಗಿ ಹಿಂದೆಯೇ ಈ ಸಭೆಯಲ್ಲಿ ಬಂದು ಹೇಳಿದೆ. ಅನೇಕ ಕೆರೆಗಳು ಒಡೆದು ಹೋದರೂ ಇನ್ನೂ ರಿಪೇರಿಯಾಗಿಲ್ಲ. ಇದುವರೆಗೆ ಬಡ್ಡಿ ಇಲ್ಲದೆಯೇ ಸಾಲಕೊಡುತ್ತಿದ್ದೆವುಎಂದು ಹೇಳಿದರು. ಗುಲ್ಬರ್ಗ ಜಿಲ್ಲೆಗೆ 1 ಲಕ್ಷ 40 ಸಾವಿರ ರೂಪಾಯಿಗಳು, ನನ್ನ ಜಿಲ್ಲೆಗೆ ಅತಿ ಸ್ವಲ್ಪ ಹಣವನ್ನು ಕೊಟ್ಟಿದ್ದರೂ ಬಡ್ಡಿ ಇಲ್ಲದೆ ಸಾಲವನ್ನು ಕೊಟ್ಟಿಲ್ಲ. ಇಂತಹ ಒಂದು ತಾರತಮ್ಯವನ್ನು ಖಂಡಿತ ಮಾಡಬೇಡಿ. ಮೈಸೂರು ದೇಶದ ಎಲ್ಲಾ ಭಾಗಗಳಿಗೂ, ಪ್ರದೇಶಗಳಿಗೂ ಸಮನಾಗಿ ಹಂಚಿಕೆ ಮಾಡಬೇಕೆನ್ನುವ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು. ಈ ಸಪ್ಲಿಮೆಂಟರಿ ಬಜೆಟ್ಟನ್ನು ತಂದಿರತಕ್ಕ ಅರ್ಥಿಕ ಸಚಿವರು ಇತರ ಮಿತವ್ಯಯಗಳನ್ನು ಬಹಳ ಕಟ್ಟುನಿಟ್ಟಾಗಿ ಅನುಸರಿಸುತ್ತಾರೆಂದು ನಾನು ನಂಬಿರುತ್ತೇನೆ. ಈಗ 5 ಕೋಟಿ ರೂಪಾಯಿಗಳು ಬೇಕು ಎಂದು ಈ ಸಪ್ಲಿಮೆಂಟರಿ ಬೇಡಿಕೆಯನ್ನು ತಂದಿದ್ದೀರಿ. ಇದರಲ್ಲಿ ಆದಷ್ಟು ಮಿತವ್ಯಯಮಾಡಿ ದೇಶ ಇಂತಹ ಸಂಕಷ್ಟ ಪರಿಸ್ಥಿತಿ ಇರುವಾಗ ಮಿತವ್ಯಯಮಾಡಿ ಉಳಿದ ಹಣವನ್ನೆಲ್ಲಾ ಯುದ್ಧದ ಪರಿಸ್ಥಿತಿಗೆ ಉಪಯೋಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಹೇಳುತ್ತೇನೆ. ಮಿತವ್ಯಯವನ್ನು ಹೆಚ್ಚಿಗೆ ಮಾಡುವುದರಿಂದ ತೆರಿಗೆ ಬಡ ರೈತರ ಮೇಲೆ ವಿಶೇಷವಾಗಿ ಹಾಕತಕ್ಕ ಒಂದುದಾರಿಯನ್ನು ತಪ್ಪಿಸಿಕೊಳ್ಳಬಹುದು. ಇವತ್ತು ನಮ್ಮ ಈ ಸಭೆಯ ಮುಂದೆ ಇನ್ನೂ ಅನೇಕ ತೆರಿಗೆಗಳ ಮಸೂದೆಗಳು ಬರುತ್ತವೆ. ಈ ತೆರಿಗೆ ಮಸೂದೆಗಳನ್ನು ಈ ಸಭೆಯಮುಂದೆ ತರುವುದಕ್ಕೆ ಮುಂಚಿತವಾಗಿ ಈ ಪಾನನಿರೋಧ ವಿಷಯವಾಗಿ ಯಾವುದೋ ಒಂದು ರೀತಿಯ ನೀತಿಯನ್ನು ತೆಗೆದುಕೊಳ್ಳುವ ಮನಸ್ಸು ಸರ್ಕಾರಕ್ಕಿದೆಯೆಂದು ನಾನು ತಿಳಿಯುತ್ತೇನೆ. ಈ ಶಾಸನ ಸಭೆಯಲ್ಲಿ ಒಂದು ನಿರ್ಣಯವನ್ನು ಆ ಬಗ್ಗೆ ತೆಗೆದುಕೊಳ್ಳಿ. ಈಗ ಈ ತೆರಿಗೆ ಮಸೂದೆಗಳನ್ನು ಬೇಕಾದರೆ ಹಿಂದಕ್ಕೆ ತಗೆದುಕೊಂಡು ಈ ಪಾನನಿರೋಧ ಶಾಸನ ಜಾಗತ್ರ ಜಾರಿಗೆ ಬರಲಿ ಎಂದು ನಾನು ಹೇಳುತ್ತೇನೆ. ಆದರೆ ಸರ್ಕಾರ ಎಲ್ಲಾ ಕಡೆಗಳಿಂದಲೂ ದುಡ್ಡು ಬರಲಿ ಎಂಬ ಒಂದೇ ತತ್ವವನ್ನು ಯಾವಾಗಲೂ ಇಟ್ಟುಕೊಳ್ಳಕೂಡದು ಎಂಬುದಾಗಿ ನಾನು ಹೇಳುತ್ತೇನೆ. ಮುಖ್ಯವಾಗಿ ಈಗ ಪಾನನಿರೋಧ ಶಾಸನ ಯಶಸ್ವಿಯಾಗಿ ಕಾರ್ಯಾಚರಣೆ ಮಾಡಲು ಜಾರಿಗೆ ಬರುವಂತೆ ಮಾಡಿ. ಇದನ್ನು ಮೊದಲು ಮಾಡಿ ಎಂಬುದಾಗಿ ನಾನು ಹೇಳುತ್ತೇನೆ. ಈಗಲೇ ಈ ಬಾಬಿಗೆ ಸುಮಾರು 2½ ಲಕ್ಷ ರೂಪಾಯಿಗಳನ್ನು ಕೇಳಿದರೆ ಅದು ದೇಶಕ್ಕೆ ತುಂಬಾ ಅನ್ಯಾಯ ಮತ್ತು ದೇಶದ ದುಡ್ಡನ್ನು ಅಪವ್ಯಯ ಮಾಡಿದಂತಾಗುತ್ತದೆಂದು ನಾನು ಹೇಳುತ್ತೇನೆ, ಮುಖ್ಯವಾಗಿ ಇಡೀ ದೇಶದಲ್ಲಿ ಈ ಪಾನನಿರೋಧ ಶಾಸನವನ್ನು ಸರಿಯಾಗಿ ಜಾರಿ ಮಾಡಲಿಲ್ಲ ಜನಗಳಲ್ಲಿ ಇದರಿಂದ ಒಳ್ಳೆಯ ಪರಿಣಾಮವನ್ನು ಉಂಟುಮಾಡಲಿಲ್ಲ. ಆದರೆ ಒಟ್ಟಿನಲ್ಲಿ ಈ ರೀತಿ ಹೊಸ ಹೊಸ ತೆರಿಗೆಗಳನ್ನು ಹಾಕುವುದು ಬೇಡ. ಈ ತೆರಿಗೆಗಳ ಮಸೂದೆಗಳನ್ನು ಮಾತ್ರ ಈಗ ಸದ್ಯಕ್ಕೆ ಹಿಂದೆ ಸರಿಸಿ ಎಂಬುದಾಗಿ ಹೇಳಿ ಪಾನ ನಿರೋಧ ಶಾಸನವನ್ನು ಆದಷ್ಟು ಬೇಗ ದೇಶದಲ್ಲೆಲ್ಲಾ ಜಾರಿಗೆ ತರುವುದಾದರೆ ಬಹಳ ಒಳ್ಳೆಯದು. ಜಾಗ್ರತೆಯಾಗಿ ಆ ಶಾಸನ ಈ ಸಭೆಯಲ್ಲಿ ಪಾಸ್ ಆಗಲಿ ಎಂಬುದಾಗಿ ಹೇಳಿ ಕೊನೆಯಲ್ಲಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ವಾಮಿ, 1962-63ನೆಯ ಸಪ್ಲಿಮೆಂಟರಿ ಎಸ್ಟಿಮೇಟು ಈಗ ನಮ್ಮ ಮುಂದೆ ಇದೆ. ಈಗತಾನೇ ಇದರಲ್ಲಿ ಏನಿವೆ ಯೆಂಬುದನ್ನು ಓದುತ್ತಾ ಇದ್ದೇವೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇದರಲ್ಲಿ ಏನಿದೆ, ಏನಿಲ್ಲ ಎಂಬುದನ್ನು ತಿಳಿದುಕೊಂಡು ಈ ಸಭೆಯಲ್ಲಿ ಸರಿಯಾಗಿ ಹೇಳಬೇಕು. ಈಗತಾನೆ ಹಣಕಾಸಿನ ಮಂತ್ರಿಗಳು ತಾವು ಹೇಳುವುದನ್ನು ನಿಧಾನವಾಗಿ ಕೇಳಬೇಕು. ಈ ವರ್ಷದಲ್ಲಿ ಏನೇನು ಮಾಡಿದ್ದೇವೆ ಎಂಬುದನ್ನು ಮಾನ್ಯ ಸದಸ್ಯರು ತಾಳ್ಮೆಯಿಂದ ಕೇಳಬೇಕು ಎಂಬುದಾಗಿ ಹೇಳಿದರು. ಅವರು ನಾವು ಮಾಡಿದ್ದನ್ನು ನಾವು ಹೇಳುತ್ತೇವೆ. ನೀವು ಮಾಡಿದ್ದನ್ನು ನೀವು ಹೇಳಿ ಎಂಬುದ ಗಿಯೂ ಹೇಳಿದರು. ಆದರೆ ಅವರು ಎಷ್ಟು ಉದಾಸೀನವಾಗಿ ಇನ್ನೊಬ್ಬರ ಮೇಲೆ ಮಾತನಾಡುತ್ತಾರೋ ಅಷ್ಟೇ ಉದಾಸೀನವಾಗಿ ನಾವೂ ಸಹ ಅವರನ್ನು ಕಾಣಬೇಕಾಗಿದೆ. ನಾವು ಹೇಳುವುದನ್ನು ಸರ್ಕಾರದವರಿಗೆ ಕೇಳುವುದಕ್ಕೆ ಇಚ್ಛೆ ಇಲ್ಲದೇ ಹೋದರೆ ನೀವು ಹೇಳಬೇಡಿ ಎಂದರೆ ಕೂತುಕೊಳ್ಳುತ್ತೇನೆ. ಅಧ್ಯಕ್ಷರು ಇದಕ್ಕೆ ಎಕ್ಸ್‌ಪ್ಲನೇಷನ್ ಸರ್ಕಾರದವರು ಕೊಡಬೇಕೆಂದು ಅಪ್ಪಣೆ ಕೊಡಿಸಿದ್ದರೆ ಬಹಳ ಚೆನ್ನಾಗಿತ್ತು. ಅವರು ಏನೇನು ಹೇಳಿದರೂ ಚಿಂತೆಯಿಲ್ಲ. ಇದು ಮತ್ತೊಮ್ಮೆ ಅವರ ಬುದ್ಧಿವಂತಿಕೆಯನ್ನು ಇಲ್ಲಿ ಪ್ರದರ್ಶನ ಮಾಡಿದ್ದಾರೆ.

MR. SPEAKER.—There are many members who desire to participate in the debate. I would very much desire that Hon'ble Member is as brief as possible.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರು ಈ ದೇಶ ತುರ್ತುಪರಿಸ್ಥಿತಿಯಲ್ಲಿದೆ, ಆ ತುರ್ತು ಪರಿಸ್ಥಿತಿಗೆ ಹೊಂದಿಕೊಂಡು ದೇಶಾದ್ಯಂತ ಓಡಾಡಿ ಮಾತನಾಡುತ್ತಿದ್ದಾರೆಂದರೆ, ಅದು ಒಂದು ಆಡಳಿತ ಸೂತ್ರ ಹಿಡಿದಿರತಕ್ಕಂತಹ ಈ ಮಂತ್ರಿಮಂಡಲದ ಒಂದು ಜಾಣ್ಮೆಯೋ ಏನೋ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈಗ ಮತ್ತೊಮ್ಮೆ ಮಂತ್ರಿಗಳು ಈ ಸಪ್ಲಿಮೆಂಟರಿ ಗ್ರಾಂಟ್‌ನಲ್ಲಿ 99 ಕೋಟಿ ರೂಪಾಯಿಗಳನ್ನು ಡಿಫೆನ್ಸಿಗೆಂದು ತೆಗೆದಿಟ್ಟಿದ್ದಾರೆಂಬುದಾಗಿ ಹೇಳಿದರು. ಅಂತಹದು ಡಿಫೆನ್ಸಿಗೆ ಎಂದು ತೆಗೆದಿಟ್ಟಿದ್ದರೆ ನಾವೆಲ್ಲಾ ಬೆಂಬಲ ಕೊಡಬಹುದು. ಆದರೆ ದೇಶದ ರಕ್ಷಣೆಗೋಸ್ಕರವೆಂದು ಬಾಯಲ್ಲಿ ಹೇಳಿ ಮಜಾಮಾಡಿದರೆ ಏನು ಮಾಡುವುದು ? ದೇಶದ ರಕ್ಷಣೆಗಾಗಿ ಬೇಕಾದ ಆಹಾರೋತ್ಪಾದನೆ ಸೌಲಭ್ಯಗಳ ಬಾಬಿಗೆ ಏನಾದರೂ ಹಣಕಾಸನ್ನು ಕೇಳಿದ್ದಾರೆಯೇ ಎಂದು ನೋಡಿದರೆ ಅದೇನನ್ನೂ ಕೇಳಲಿಲ್ಲ. ಅಂಥಾದ್ದು ಏನೂ ಕಾಣುತ್ತಾ ಇಲ್ಲವೆಂದು ನನ್ನ ಕೆಲವು ಸ್ನೇಹಿತರೂ ಸಹ ಹೇಳಿದರು.

MR. SPEAKER.—(Addressing Sri C. J. Muckannappa) Is it that you do not want this Government to spend for the defence ?

SRI C. J. MUCKANNAPPA.—I want them to support food production.

Mr. SPEAKER.—Is food production supporting defence as such ? Measures to support defence are something different.

Sri C. J. MUCKANNAPPA.—It will certainly help if you produce more. It will also certainly help if you give physical training to students. ಈ ಪುಸ್ತಕವನ್ನು ನೋಡಿದರೆ ಇದರಲ್ಲಿ ಯಾವುದಕ್ಕೆ ಬೇಕೋ ಅದಕ್ಕೆ ಸಾಕಷ್ಟು ಹಣವನ್ನು ಒದಗಿಸಿಲ್ಲ. ಇದರಲ್ಲಿ ಒಂದನ್ನು ಮಾತ್ರ ನಾನು ಒಪ್ಪಬೇಕಾಗಿದೆ. 93 ಲಕ್ಷ 60 ಸಾವಿರ ರೂಪಾಯಿಗಳನ್ನು ಬಾವಿಗಳಿಗೋಸ್ಕರ ಇಟ್ಟಿದ್ದಾರೆ. ಅದೊಂದನ್ನು ಮಾತ್ರ ನಾವು ಒಪ್ಪಬಹುದು. ಇನ್ನು ಮಿಕ್ಕದ್ದನ್ನೆಲ್ಲಾ ತೆಗೆದುಹಾಕಿ. ಪೋಲೀಸಿನವರಿಗ ಇಷ್ಟು ವರ್ಷಗಳಿಂದ ಮನೆಗಳನ್ನು ಕೊಡದೆ ಇರತಕ್ಕ ಪರಿಸ್ಥಿತಿ ಈಗ ಏನು ಬಂತು. ಬರೀ ಪೋಲೀಸಿನವರಿಗೆ ಮನೆಗಳನ್ನು ಕೊಡುವ ತುರ್ತು ಪರಿಸ್ಥಿತಿ ಈಗ ಏನು ಬಂದಿದೆ ಸ್ವಾಮಿ ! ಅಂತಹ ಪ್ರಮೇಯ ಈಗ ಒದಗಿಲ್ಲ. ಮೊದಲಿನಿಂದಲೂ ನಾವು ಹೇಳಿದ್ದೇ ಹೇಳಿದ್ದು, ನೀವು ಮಾಡಿದ್ದೇ ಮಾಡಿದ್ದು. ಇದು ನಿಜವಾಗಿ ಸರಿಯಾಗಿ ಕಾಣುವುದಿಲ್ಲ. ಈ ದಿನದ ಪರಿಸ್ಥಿತಿಗೆ ಹೊಂದಿಕೊಂಡು ಸರಕಾರ ತನ್ನ ಕಾರ್ಯಕಲಾಪಗಳನ್ನು ನಡೆಸಬೇಕು. ಆದರೆ ಇವತ್ತು ಅವರು ಮಾಡಿದ್ದು ಸರಿಯೆಂದು ನಾನು ಒಪ್ಪುವುದಿಲ್ಲ. ಪ್ರಜಾಭಿಪ್ರಾಯವನ್ನು ತಮ್ಮ ಕಡೆಗೆ ತೆಗೆದುಕೊಂಡು ಹೋಗಬೇಕಾದರೆ ನಿಮ್ಮ ಮಾರ್ಗವನ್ನು ಮೊದಲು ಸರಿಪಡಿಸಬೇಕು. ಇದರಲ್ಲಿ ಒದಗಿಸಿರುವ ಕೆಲವು ಬಾಬುಗಳ ಹಣ ಈ ಮಾನ್ಯ ಸಭೆಯ ಒಪ್ಪಿಗೆ ಪಡೆಯಲಿಕ್ಕೆ ಲಾಯಕ್ಕು ಇಲ್ಲ. ಇದನ್ನು ಕೂಲಂಕಷವಾಗಿ ಯೋಚನೆ ಮಾಡಬೇಕು. ಮಾನ್ಯ ಹಣಕಾಸಿನ ಮಂತ್ರಿಗಳು ಹಣಕಾಸಿನ ವಿಚಾರದಲ್ಲಿ ನಿಪುಣರೂ ಮತ್ತು ಬುದ್ಧಿವಂತರೂ ಆಗಿದ್ದಾರೆ. ಅಂದಮೇಲೆ ಇವನ್ನೆಲ್ಲಾ ಯೋಚನೆ ಮಾಡಿದರೆ ಅವರಿಗೇ ಎಲ್ಲವೂ ಅರ್ಥವಾಗುತ್ತದೆ ಐದು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಪೋಲೀಸ್ ಸಪ್ಲಿಮೆಂಟರಿ ಗ್ರಾಂಟಿಗೆ ದುಡ್ಡು ಕೊಟ್ಟಿದ್ದು ಮಾರ್ಚ್‌ನೊಳಗೆ ಈಗ ಎಂಟೂವರೆ ತಿಂಗಳುಗಳಾದರೂ ಇನ್ನು ಹೆಚ್ಚು ಖರ್ಚಾಗುತ್ತದೆ. ಮತ್ತೆ ಹಣ ಬೇಕು ಎಂದು ಕೇಳುವುದು ಸರಿಯಲ್ಲ. ಅವರ ಬಟ್ಟೆ, ಗುಂಡಿ, ಷೂ, ಚಳ್ಣಕ್ಕೆ ಹಣ ಬೇಕು, ಅವನ್ನೆಲ್ಲಾ ಕೊಂಡುಕೊಳ್ಳಬೇಕು ಎಂದು ಮತ್ತೆ ಕೇಳುವುದು ಖಂಡಿತವಾಗಿ ಸಾಧುವಲ್ಲ. ಪೋಲೀಸ್ ಆಡಳಿತ ಡಿಮ್ಯಾಂಡಿನ ಬಗ್ಗೆ ಎಷ್ಟು ಖರ್ಚಾಗುತ್ತದೆ ಎಂಬುದನ್ನು ಮೊದಲೇ ನಿರ್ಧಾರ ಮಾಡಿ ಇಷ್ಟು ಹಣದ ಮಂಜೂರಾತಿ ಆಗಬೇಕೆಂದು ಬಡ್ಜೆಟ್ ಕಾಲದಲ್ಲಿಯೇ ಕಳುಹಿಸಬಹುದಾಗಿತ್ತು. ನೂರಾರು ಅಧಿಕಾರಿಗಳು ಈ ಪೋಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಾಗ ಇಂಥಾದ್ದನ್ನು ಯೋಚನೆ ಮಾಡಲಿಲ್ಲವೆಂದರೆ ಹೇಗೆ ? ಅವರಿಗೆ ಮುಂದಿನ ವರ್ಷಕ್ಕೆ ಏನೇನು ಅತ್ಯವಶ್ಯಕವಾಗಿ ಬೇಕು ಎಂಬುದನ್ನು ಮೊದಲೇ ನಿರ್ಧರಪಡಿಸುವುದು ಅವರ ಪ್ರಥಮ ಕರ್ತವ್ಯ. ಅನ್‌ಫೋರ್‌ಸೀನ್ ಎಕ್ಸ್‌ಪೆಂಡಿಚರ್ ಆದರೆ ಮಾತ್ರ ನಾವೆಲ್ಲರೂ ಒಪ್ಪಿಕೊಳ್ಳೋಣ. ಯಾರಿಗೂ ಕಾಣದೆ ಅಗೋಚರವಾಗಿ ಈಗ ಚೀಣೀಯರು ಇಂಡಿಯಾ ದೇಶದ ಮೇಲೆ ದಂಡೆತ್ತಿ ಬಂದಿರುವುದು ತುರ್ತುಪರಿಸ್ಥಿತಿಯೆನ್ನಬಹುದು. ಅಕಸ್ಮಾತಾಗಿ ಸಂಭವಿಸಬಹುದಂಥ ಖರ್ಚು. ಅಂಥಾದಕ್ಕೆ ಖರ್ಚು ಮಾಡವುದು ನ್ಯಾಯವಾದುದು ಮತ್ತು ಸಮಂಜಸವಾದುದು. ಆದರೆ ಮೈಸೂರು ಸಂಸ್ಥಾನದಲ್ಲಿ ಈಗಿನ ತುರ್ತುಪರಿಸ್ಥಿತಿಯಲ್ಲಿ ಪೋಲೀಸರಿಗೆ ನಿಕ್ಕರ್ ಬಟ್ಟೆ, ಪ್ಲೈಲಟ್ ಷೂ, ತಲೆಗೊಂದು ಕಬ್ಬಿಣದ ಟೋಪಿ, ಹ್ಯಾಮರ್, ಇವೆಲ್ಲಾ ಕೊಂಡುಕೊಳ್ಳಬೇಕು, ಇವತ್ತು ಐದೂವರೆ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಎಂದು ಹೇಳಿದರೆ ಇದು ಯಾವ ನ್ಯಾಯವೆಂದು ನಾನು ಈ ಸಂದರ್ಭದಲ್ಲಿ ಕೇಳಬೇಕಾಗಿದೆ. ಇದರಿಂದ ಇವರ ಜಾಣ್ಮೆ ಏನೆಂಬುದೇ ಗೊತ್ತಾಗಲಿಲ್ಲ. ಇವತ್ತು ಡಿಫಿಸಿಟ್ ಬಡ್ಜೆಟ್ಟನ್ನು ತರುತ್ತಿದ್ದೀರಿ. ಇದು ಎಂತಹ ಜಾಣ್ಮೆ ಎಂದು ಪ್ರಶ್ನೆ ಮಾಡಬೇಕಾಗಿದೆ. ಈ ಖೋತಾ ಬಡ್ಜೆಟ್ಟನ್ನು ಈಗ ಮಂಡಿಸುವುದರಿಂದ ದೇಶ ಯಾವ ರೀತಿ ಅಭಿವೃದ್ಧಿಯಾಗುತ್ತದೆ. ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಚೆನ್ನಾಗಿದೆಯೆಂಬುದಾಗಿ ಅಲ್ಲಲ್ಲಿ ಭಾಷಣ ಮಾಡುವ ಅರ್ಥವೇನೆಂದು ಕೇಳಬೇಕಾಗಿದೆ ಇವತ್ತು ಕೇಂದ್ರ ಸರ್ಕಾರದಿಂದ ಹಣವನ್ನು ತರುವುದಿಲ್ಲ. ಆದಷ್ಟು ವೃಥಾ ಖರ್ಚಾಗತಕ್ಕ ಹಣವನ್ನು ಉಳಿಸಬೇಕೆಂದು ಬೇರೆ ಹೇಳುತ್ತಿರುತ್ತೀರಿ.

Mr. SPEAKER.—(Addressing Sri Muckannappa) Do you want the Government to refuse the grant from the centre ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಅಭಿಪ್ರಾಯ ಅದಲ್ಲ. ಈಗ ಬಡ್ಜೆಟ್ಟಿನಲ್ಲಿ 20 ಕೋಟಿ ರೂಪಾಯಿಗಳ ಖೋತಾ ಇದೆ. ಅದನ್ನು ಹೇಗಾದರೂ ಮಾಡಿ ಸರಿದೂಗಿಸಬೇಕೆಂಬ ಅಭಿಪ್ರಾಯವನ್ನು ಸರ್ಕಾರದವರು ಈಗ ಇಟ್ಟುಕೊಂಡಿದ್ದಾರೆ. ಆದ್ದರಿಂದ ನಾವು ಇವತ್ತು ಮಾಡತಕ್ಕ ಟೀಕೆಗಳನ್ನು ಸರಿಪಡಿಸಿಕೊಂಡು ಮತ್ತು ನಾವು ಕೊಡತಕ್ಕ ಸಲಹೆಗಳಲ್ಲಿ ಯಾವುದು ಸರಿಯೆಂದು ಮತ್ತು ಸೂಕ್ತವೆಂದು ಕಾಣುತ್ತದೋ ಅಂತಹುಗಳ ಕಡೆ ಸರ್ಕಾರ ಕೂಡಲೇ ಗಮನವನ್ನು ಕೊಡಬೇಕು. ಸುಗಮವಾದ ಆಡಳಿತಕ್ಕೆ ಪೋಲೀಸ್ ಡಿಪಾರ್ಟ್‌ಮೆಂಟ್ ಮತ್ತು ಹೋಂ ಡಿಪಾರ್ಟ್‌ಮೆಂಟ್ ಅತ್ಯವಶ್ಯಕವಾಗಿ ಬೇಕಾಗಿರುವುದೇನೋ ಸರಿ. ಆದರೆ ಇದರ ಮೇಲೆ ಅಷ್ಟಾಗಿ ನಾನು ವಾದ ಮಾಡುವುದಕ್ಕೆ ಈಗ ಹೋಗದೆ ಇದ್ದರೂ ಈ ಇಲಾಖೆಗೆ ಖರ್ಚು ಮಾಡುವ ಬಗ್ಗೆ ಸರ್ಕಾರಕ್ಕೆ ಸ್ವಲ್ಪ ವಿತರಣೆ ಬೇಕಾಗಿದೆ. ಇವತ್ತು ಈ ಮ್ಯೂಜಿಯಂ ಕಟ್ಟದೇ ಹೋದರೆ ಏನಾಗುತ್ತಿತ್ತು. ಇಂತಹವುಗಳು ಇನ್ನೂ ಎಷ್ಟೋ ಇವೆ. ಸಮಯ ಸಾಕಷ್ಟು ಇಲ್ಲದೇ ಇರುವುದರಿಂದ ಕೆಲವು ವಿಚಾರಗಳ ಬಗ್ಗೆ ಮಾತನಾಡುತ್ತೇನೆ.

Mr. SPEAKER.—I will now give you time for half an hour more to speak and resume after tea-time. The House will now rise to meet again at 3-30 P.M.

The House adjourned at Three of the Clock to meet again at Thirty Minutes past Three of the Clock.

[MR. DEPUTY SPEAKER in the Chair].

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ ಸರ್ಕಾರದವರು ಇವೊತ್ತಿನ ಪರಿಸ್ಥಿತಿಗೆ ಯಾವುದು ಬೇಕಾದರೂ ಮಾತನಾಡಿಕೊಳ್ಳಲಿ. ಅವರು ಇವೊತ್ತಿನ ಪರಿಸ್ಥಿತಿಗನುಗುಣವಾಗಿ ವ್ಯವಹಾರ ಮಾಡುತ್ತಿಲ್ಲ. ಇಂಡಿಯಾ ಸರ್ಕಾರದ ಮ್ಯಾಚಿಂಗ್ ಗ್ರ್ಯಾಂಟಿಗೆ ಕೊಟ್ಟಿದ್ದೇವೆ. ಅದಕ್ಕೋಸ್ಕರ ಉಪಯೋಗಿಸಿದ್ದೇವೆ ಎಂದು ಹೇಳುತ್ತಾರೆ. ಇದರ ಹಿನ್ನೆರೆ ಬಹಳ ಇತ್ತು. 200 ಮೋಟಾರುಗಳನ್ನು ಮಾರಬೇಕು, ಟ್ರಾನ್ಸ್‌ಪೋರ್ಟ್ ಪ್ರೈವೇಟ್ ಪೀಪಲ್ ಮಾಡಬೇಕು, ಮೈನಿಂಗ್ ಡೆವಲಪ್‌ಮೆಂಟ್ ಬೋರ್ಡ್ ಇಟ್ಟುಕೊಳ್ಳಬಾರದು, ಎಂದಿದ್ದರೂ ಇತ್ತೀಚೆಗೆ ಪರಿಸ್ಥಿತಿ ಬದಲಾವಣೆಯಾಗಿದೆ. ಅವರ ಚಾಸಿಗಳು, ಲಾರಿಗಳನ್ನು ಬದಲಾವಣೆ ಮಾಡಬಾರದು ಎಂದು ತೀರ್ಮಾನವಾಗಿದೆ. ಆದ್ದರಿಂದ ಅದರ ಗೋಜಿಗೆ ನಾನು ಹೋಗುವುದಿಲ್ಲ.

ಆಮೇಲೆ ಡಿಮ್ಯಾಂಡ್ 20ರಲ್ಲಿ ಫಿಷರೀಸ್ ಡಿಪಾರ್ಟ್‌ಮೆಂಟಿಗೋಸ್ಕರ ಐಟಂ ನಂಬರ್ 4ರಲ್ಲಿ 6 ಲಕ್ಷ, ಐಟಂ ನಂಬರ್ 5ರಲ್ಲಿ ಒಂದು ಲಕ್ಷ, ಐಟಂ ನಂಬರ್ 6ರಲ್ಲಿ ಒಂದು ಲಕ್ಷ 50 ಸಾವಿರ, ಐಟಂ ನಂಬರ್ 8ರಲ್ಲಿ 25 ಸಾವಿರ, ಐಟಂ ನಂಬರ್ 9ರಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಸಪ್ಲಿಮೆಂಟರಿ ಗ್ರ್ಯಾಂಟನ್ನು ಒದಗಿಸಬೇಕೆಂದು ಕೇಳಿದ್ದಾರೆ. Mechanisation of Fishing Crafts ಗೆ 6 ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಜನರಲ್ ಬಡ್ಜೆಟ್ ಡಿಸ್‌ಕಷನ್‌ನಲ್ಲಿ ಅನೇಕ ಜನ ಮಾನ್ಯ ಸದಸ್ಯರು ಹೇಳಿದರು. ಇದನ್ನು ಹೇಗೆ ಮಾಡಬೇಕು ಎಷ್ಟು ಹಣವನ್ನು ಒದಗಿಸಬೇಕೆಂಬುದನ್ನು ಆ ಡಿಪಾರ್ಟ್‌ಮೆಂಟಿನವರು ಮತ್ತು ಸೆಕ್ರೆಟೇರಿಯಟ್‌ನವರು ತಮಗೆ ಅಡ್ವೈಜ್ ಮಾಡುವುದಿಲ್ಲವೇ ? ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಫಿಷರೀಸ್ ಡೆವಲಪ್ ಮಾಡಬೇಕು, ಅದಕ್ಕೋಸ್ಕರ ಬಡ್ಜೆಟ್ಟಿನಲ್ಲಿ ಎಷ್ಟು ಹಣವನ್ನು ಒದಗಿಸಬೇಕು ಎಂಬುದನ್ನು ಡಿಪಾರ್ಟ್‌ಮೆಂಟಿನವರು ಸರ್ಕಾರದವರಿಗೆ ಅಡ್ವೈಜ್ ಮಾಡದೆಹೋದರೆ ಇಷ್ಟೊಂದು ದೊಡ್ಡ ಡಿಪಾರ್ಟ್‌ಮೆಂಟ್ ನಡೆಸುವುದು ಅಗತ್ಯ ನನಗೆ ಕಾಣುವುದಿಲ್ಲ. ಈಗ ಯುದ್ಧ ಆಗುತ್ತಿರುವುದರಿಂದ ಆಹಾರದ ಕೊರತೆ ಇದೆ. ಇವೊತ್ತಿನ ಪರಿಸ್ಥಿತಿಗನುಸಾರವಾಗಿ ಫಿಷರೀಸ್ ಅನ್ನು ಡೆವಲಪ್ ಮಾಡಿ ಅದರಿಂದ ಆಹಾರದ ಕೊರತೆಯನ್ನು ನೀಗಿಸಬಹುದು. ಸರ್ಕಾರದವರು ಇಂಥಾ ಎಡರು ತೊಡರುಗಳನ್ನೆಲ್ಲಾ ಯೋಚನೆ ಮಾಡಿ ತಮ್ಮ ಬುದ್ಧಿವಂತಿಕೆಯನ್ನು ತೋರಿಸಬೇಕು. ಆಹಾರದ ಕೊರತೆ ಇರುವಾಗ ಫಿಷರೀಸ್ ಡೆವಲಪ್ ಮಾಡಿ ಆಹಾರದ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯ ಎನಿಸುತ್ತದೆ. Salt subsidy scheme ಮಾಡದೆಹೋದರೆ ಫಿಷರೀಸ್ ಡೆವಲಪ್ ಆಗುವುದಿಲ್ಲ. ಈ ವಿಷಯದಲ್ಲಿ ಎಷ್ಟೋ ಜನ ಮಾನ್ಯ ಸದಸ್ಯರು ತಮ್ಮ ಸಲಹೆಗಳನ್ನು ಕೊಟ್ಟಿದ್ದಾರೆ. ಅವರಲ್ಲೂ ಸೌತ್ ಕೆನರಾ ಮಾನ್ಯ ಸದಸ್ಯ ಒಂದೇ ಸಮನಾಗಿ ಕೂಗಾಡಿದರು. ಬೆಸ್ತರು ಹೋಗಿ ಮೀನು ಹಿಡಿಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರು. ಇದರ ಬಗ್ಗೆ ಸರ್ಕಾರದವರು ಏನು ಮಾಡಿದ್ದಾರೆ ? ಸುಮ್ಮನೆ ಹಣ ಬೇಕು, ಹಣ ಬೇಕು ಎಂದು ಹೇಳಿ ನಮ್ಮ ಒಪ್ಪಿಗೆಯನ್ನು ತೆಗೆದುಕೊಳ್ಳುವುದು ಸರಿಯಲ್ಲ. ಆಮೇಲೆ 'Fisheries Education and Training'ಗೋಸ್ಕರವಾಗಿ ಎರಡು ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಅವೊತ್ತು ಇದು ಅರ್ಥವಾಗಲಿಲ್ಲವೇ ? ಹಣಕಾಸಿನ ಖಾತೆಗೆ ಎಷ್ಟು ಹಣ ಬೇಕು ಎಂದು ಕೇಳಲು ಸರಿಯಾದಂತ ರೀತಿಯಲ್ಲಿ ಲೆಕ್ಕಾಚಾರ ಆಗುತ್ತಾ ಇಲ್ಲ. "ಕಿವುಚಿಟ್ಟ ಮೂಗುಂಡ" ಅವನು ಇಟ್ಟಷ್ಟು, ಅವನು ಉಂಡಷ್ಟು. ಇಷ್ಟು ಹಣ ಬೇಕೆಂದು ಕೇಳುವುದಕ್ಕೆ ಬರುವುದಿಲ್ಲವೇ ? ಇದನ್ನು ಏತಕ್ಕೆ ಹೇಳುತ್ತೇನೆಂದರೆ, ಈ ವಿಚಾರದಲ್ಲಿ ಸ್ವಲ್ಪ ಬುದ್ಧಿವಂತಿಕೆ ಇರಬೇಕು. ಅಧಿಕಾರ ಇನ್ನೂ ಯಾರ ಕೈಯ್ಯಲ್ಲೂ ಸಿಕ್ಕುವುದಿಲ್ಲ ಎಂದುಕೊಂಡಿಲ್ಲ. ಇವೊತ್ತು ಕಾಂಗ್ರೆಸ್ಸಿನವರ ಕೈಯ್ಯಲ್ಲಿವೆ. ನಾಳೆ ಇನ್ನೊಬ್ಬರು ಅಧಿಕಾರಕ್ಕೆ ಬರಬಹುದು. 15 ವರ್ಷಗಳ ಅನುಭವವನ್ನು ಪಡೆದು ಈ ರೀತಿ ಮಾಡಬಾರದು. ಈಗ ಇರುವುದು ಸರಿಯೋ ಅಥವಾ ತಪ್ಪೋ ಎಂದು ಒಂದು ತೀರ್ಮಾನಕ್ಕೆ ಬರಬಾರದು. ಲೋಪದೋಷಗಳಿಂದ ಕೂಡಿದಂಥಾ ಮತ್ತು ಹೋದ ವರ್ಷಕ್ಕೆ ಇಟ್ಟಿದ್ದಂಥ ಫಿಗರ್ಸ್ ಅನ್ನು ಟ್ಯಾಲಿ ಮಾಡಿ ಹತ್ತು ಆ ಕಡೆ, ಹತ್ತು ಈ ಕಡೆ ಹಾಕುವುದು ಸರಿಯಲ್ಲ. ಬಡ್ಜೆಟ್ಟನ್ನು ಅಕ್ಯುರೇಟ್ ಮಾಡುವುದು, ಸರಿದೂಗಿಸುವುದು ಒಳ್ಳೆಯದು. ಪ್ರಜಾಪ್ರಭುತ್ವದಲ್ಲಿ ಐದು ವರ್ಷಕ್ಕೊಮ್ಮೆ ಚುನಾವಣೆ ನಡೆಯುತ್ತದೆ. ಐದು ವರ್ಷಕ್ಕೊಮ್ಮೆ ಹಣಕಾಸಿನ ಖಾತೆಯನ್ನು ಒಬ್ಬೊಬ್ಬರ ಕೈಯ್ಯಲ್ಲಿ ಕೊಡುತ್ತಾರೆ. ಬೇರೆ ರಾಜ್ಯದಲ್ಲಿ 20—30 ವರ್ಷ ಹಣಕಾಸಿನ ಖಾತೆ ಒಬ್ಬರ ಕೈಯ್ಯಲ್ಲಿರುತ್ತದೆ. ಹಾಗಿದ್ದರೆ ಆಗ ದೇಶ ಅಭಿವೃದ್ಧಿಗೆ ಬರುವುದಕ್ಕೆ ಸಾಧ್ಯ. ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಮೇಲೆ ಅಲ್ಲಿಷ್ಟು, ಇಲ್ಲಿಷ್ಟು ತಪ್ಪು ಇದ್ದರೂ ಇಷ್ಟು ದೂರ ತಪ್ಪು ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಡ್ಯೆರಿ ಡೆವಲಪ್‌ಮೆಂಟು ಸ್ಕೀಂಗೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ 2 ಲಕ್ಷ 64 ಸಾವಿರದ 905 ರೂಪಾಯಿಗಳನ್ನು ಒದಗಿಸಬೇಕೆಂದು ಕೇಳಿದ್ದೀರಿ. Sanction was accorded by Government, in G.O. No. AFD 63 VDD 62, dated 25th August 1962, for placing a firm order with the vulcan Trading Company, Bombay for supply of indigeneous equipment. ದೆಹಲಿಯಿಂದ ಹತ್ತು ವರ್ಷ ಅಲ್ಲಿ ರಾಜ್ಯ ಭಾರಮಾಡಿ, ಕೇಂದ್ರದಿಂದ ಫಲ ದೊರೆಯಲಿಲ್ಲ ಅಂತ ಕಂದಾಯದ ಮಂತ್ರಿಗಳು ಇಲ್ಲಿಗೆ ಬಂದರು. ಡ್ಯೆರಿ ಡೆವಲಪ್‌ಮೆಂಟ್‌ನ್ನು ತಮ್ಮ ಕೈಯಲ್ಲೇ ತೆಗೆದುಕೊಂಡರು ಅವರು ಮಾಡಿದ ಬುದ್ಧಿವಂತಿಕೆ ಏನು ? ಇಂಡಿಜನಸ್ ಎಕ್ವಿಪ್‌ಮೆಂಟಿಗಾಗಿ ಬೊಂಬಾಯಿಗೆ ಆರ್ಡರ್ ಕೊಟ್ಟಿದ್ದಾರೆ ಎಂದರೆ ಇಲ್ಲಿ ಏನೋ ಒಂದು ಕುಂದು ಇದೆ. ಇದು ನಮಗೆ ಅರ್ಥವಾಗಲಿಲ್ಲ. ಈ ಅನಿಮಲ್ ಹಸ್ಬೆಂಡರಿ ಮಿಲ್ಕ್ ಸ್ಕೀಂಗೆ ಎಷ್ಟು ಹಣಬೇಕಾಗುತ್ತದೆ ಎಂಬುದು ಅರ್ಥವಾಗಲಿಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಯು.ಎನ್.ಸಿ.ಐ.ಎಫ್. ನಿಂದ 30 ಲಕ್ಷ ರೂಪಾಯಿ ನಷ್ಟು ಮೆಷಿನರಿ ಬರಬೇಕಾದದ್ದು ಬೇಗ ಬಂತು. ಅದರ ಜೊತೆಗೆ ನಮ್ಮ ಮೆಷಿನರಿಯನ್ನು ಸೇರಿಸಿ ಈ ಕೆಲಸ ಶುರುಮಾಡಬೇಕಾಗಿ ಬಂದದ್ದರಿಂದ ಈಗ ಹಣ ಕೇಳಬೇಕಾಯಿತು. ಇಲ್ಲದೇ ಇದ್ದಿದ್ದರೆ ನ್ಯಾಯವಾಗಿ ಏಪ್ರಿಲ್‌ನಲ್ಲೇ ತೆಗೆದುಕೊಳ್ಳಬಹುದಾಗಿತ್ತು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಡ್ಯೆರಿ ಡೆವಲಪ್‌ಮೆಂಟ್ ಸ್ಕೀಂಗೆ ಯಾವುದು ಏನು ಎಂಬುದು ನಿಮಗೆ ಸರಿಯಾಗಿ ಗೊತ್ತಿಲ್ಲ. ಅವರು ಹೇಳಿದರು ನೀವು ಹೇಳುತ್ತೀರಿ, ನೀವು ಹೇಳಿದ್ದನ್ನು ನಾವು ಒಪ್ಪಿಕೊಳ್ಳಬೇಕು. ಆದ್ದರಿಂದ ನಾನು ಹೇಳುವುದು ಸ್ವಲ್ಪ ದೂರ

ದೃಷ್ಟಿ ಇರಬೇಕು. ಇದ್ದರೆ ಇಂಥಾ ಲೋಪದೋಷಗಳು ಕಡಮೆ ಯಾಗುತ್ತದೆಯೋ ಏನೋ ಎಂದು ನಾನು ಅಂದು ಕೊಳ್ಳುತ್ತೇನೆ.

ಸ್ನೇಹಿತರಾದ ಶ್ರೀಮಾರ್ ಶಿವಪ್ಪನವರು ಇಂಡಸ್ಟ್ರೀಸ್ ಮೇಲೆ ಬಹಳವಾಗಿ ಹೇಳಿದ್ದಾರೆ. ಆದರೂ ಈಗ ತುರ್ತುಪರಿಸ್ಥಿತಿಯಿರುವುದರಿಂದ ಇದರ ಮೇಲೆ ಹೆಚ್ಚು ಟೀಕೆ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಇದರಲ್ಲಿ ಒದಗಿಸಿರುವಹಣ 72 ಲಕ್ಷದ 68 ಸಾವಿರದ 100 ರೂಪಾಯಿ. ಇದರಲ್ಲಿ ಒಂದೊಂದು ಐಟಂಗೂ ವಿವರಣೆ ಕೇಳುತ್ತ ಹೋದರೆ ಎರಡು ಗಂಟೆಗಳ ಕಾಲ ಹಿಡಿಯುತ್ತದೆ. ಇಂಡಸ್ಟ್ರೀಸ್ ಮಿನಿಸ್ಟರು ಇದ್ದಾರೆ. ಡೆಪ್ಯುಟಿ ಮಿನಿಸ್ಟರು ಇದ್ದಾರೆ, ಜಾಯಿಂಟ್ ಡೈರೆಕ್ಟರ್ಸ್ ಇದ್ದಾರೆ. ಅಡೀಷನಲ್ ಡೈರೆಕ್ಟರು ಇದ್ದಾರೆ. ಡೆಪ್ಯೂಟಿ ಡೈರೆಕ್ಟರು ಇದ್ದಾರೆ. ಇವರ ಹೆಸರು ಸಾಲುಸಾಲಾಗಿ ಹಾಕಿದ್ದಾರೆ, ಹೀಗಿದ್ದಾಗ್ಯೂ ಈ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಲ್ಲಿ ಕೆಲಸ ನೀರಿಕ್ಷಣೆ ಮಾಡಿದಷ್ಟು ಕಾಣುವುದಿಲ್ಲ. ಈಗ 72 ಲಕ್ಷ ರೂಪಾಯಿ ಕೇಳುತ್ತಾ ಇದ್ದೀರಿ, ಇದನ್ನು ಎಷ್ಟು ಮಟ್ಟಿಗೆ ವಿನಿಯೋಗಿಸುತ್ತೀರಿ ಎಂಬುದನ್ನು ಕಾದು ನೋಡಬೇಕಾಗಿದೆ. ದುರ್ವ್ಯಯವಾಗದಿರಲಿ ಎಂದು ಒಂದು ಮಾತಿನಲ್ಲಿ ಹೇಳುತ್ತೇನೆ. ಹಣಕಾಸಿನ ಸಚಿವರೇ ನೀವು ಖುರ್ಚಿಯಲ್ಲಿ ಭದ್ರವಾಗಿ ಕುಳಿತು ಕೊಂಡು......

ಶ್ರೀ ಬಿ. ಡಿ. ಜತ್ತಿ.—ನಾನು ಯಾವಾಗಲೂ ಟೂರ್ ಹೊಗಿಲ್ಲ ಸುಮ್ಮನೆ ಏಕೆ ಟೀಕೆ ಮಾಡುತ್ತೀರಿ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವೂ ಕೂಡ ಟೂರ್ ಮಾಡುತ್ತೀರಿ.

ಶ್ರೀ ಬಿ. ಡಿ. ಜತ್ತಿ.—ಯಾವಾಗಲೂ ಆಫೀಸಿನಲ್ಲೇ ಇರುತ್ತೇನೆ ಬೇಕಾದರೆ ಬಂದು ನೋಡಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಪ್ರತಿಯೊಂದು ಕಾಗದವನ್ನು ಕೂಲಂಕಷವಾಗಿ ವಿಮರ್ಶೆಮಾಡುತ್ತಾ ಇದ್ದೀರಿ ಎಂದು ಪರೋಕ್ಷವಾಗಿ ತಿಳಿದು ಕೊಂಡಿದ್ದೇನೆ ಆದರೂ ಕೂಡ ಇಂಥಾದ್ದು ಬಂದರೆ ತಮ್ಮ ಬುದ್ಧಿವಂತಿಕೆ ಉಪಯೋಗಿಸಿ ಇದು ಪರೀಕ್ಷೆಗೆ ಒಳಗಾಗುತ್ತದೆಯೇ ಇಲ್ಲವೋ ಎಂಬುದನ್ನು ಸ್ವಲ್ಪ ದಯಮಾಡಿ ನೋಡಿ.

ಲೋಕಲ್ ಡೆವಲಪ್‌ಮೆಂಟ್ ಸಿ.ಡಿ. ಮತ್ತು ಎನ್.ಇ.ಎಸ್. ಬ್ಲಾಕ್‌ಗೆ 11 ಲಕ್ಷ ರೂಪಾಯಿ ಕೇಳಿದ್ದೀರಿ. ಇದು ಏಕೆ ಎಂದು ಕೇಳುತ್ತೇನೆ. ನೀವು ವಂಶ ಪಾರಂಪರ್ಯವಾಗಿ ಬಂದ ಪಟೇಲ್ ಶ್ಯಾನುಭೋಗರು ಇರಬಾರದು ಎಂದು ಹೇಳಿದಿರಿ, ಅವರ ವಂಶ ನಿರ್ನಾಮ ಮಾಡುವುದಕ್ಕೆ ಕಾನೂನು ಮಾಡಿದಿರಿ. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಶಕ್ತಿ ಇಲ್ಲದೇ ಇವತ್ತು 11 ಲಕ್ಷ ರೂಪಾಯಿ ಕೊಟ್ಟು ಪಂಚಾಯಿತ್ತಿ ಸೆಕ್ರೆಟರಿ, three ಟೈರ್ ಸಿಸ್ಟಂ, four ಟೈರ್ ಸಿಸ್ಟಂ ಅಂತ ಹೇಳಿ ಮಾಡುತ್ತಾ ಇರುವುದರ ಅರ್ಥವಾಗುವುದಿಲ್ಲ. ಏಕೆ ಹೇಳುತೇನೆ ಎಂದರೆ, ನೀವು ಕಾನೂನು ಮಾಡಿದ್ದನ್ನು ಇಂಪ್ಲಿಮೆಂಟ್ ಮಾಡುತ್ತೀರಾ ಎಂದು ರೆವಿನ್ಯೂ ಮಿನಿಸ್ಟರನ್ನು ಕೇಳಿದರೆ ಉತ್ತರವಿಲ್ಲ. cold storageನಲ್ಲಿ ಅದನ್ನು ಇಟ್ಟಿದ್ದೀರಿ. ಈಗಿನ ತುರ್ತುಪರಿಸ್ಥಿತಿಯಲ್ಲಿ ಅದನ್ನು ಹೇಳುವುದಕ್ಕೆ ಬರುವುದಿಲ್ಲ ಎನ್ನುತ್ತೀರಿ, 11 ಲಕ್ಷ ರೂಪಾಯಿ ಖರ್ಚು ಮಾಡಿ ಟ್ರೈನಿಂಗ್ ಕೊಟ್ಟು ಆ ಬಿಲ್ ಇಂಪ್ಲಿಮೆಂಟ್ ಮಾಡದಿದ್ದರೆ ಅಷ್ಟು ಹಣ ಖರ್ಚುಮಾಡಿ ಯಾದರೂ ಏನು ಪ್ರಯೋಜನ? ಅದನ್ನು ನೀರಿನಲ್ಲಿ ಹಾಕಿದ ಹಾಗಾಗುವುದಿಲ್ಲವೆ ? ಇಲ್ಲೂ ಕೂಡ ನಿಮ್ಮ ಬುದ್ಧಿವಂತಿಕೆ ಸರಿಯಾಗಿ ಕಾಣುವುದಿಲ್ಲ. ಇದನ್ನು ಸ್ವಲ್ಪ ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಈಗಿನ ತುರ್ತುಪರಿಸ್ಥಿತಿಯಲ್ಲಿ ಈ 11 ಲಕ್ಷ ರೂಪಾಯಿಗಳನ್ನು ಬೇಕಾದರೆ ಇನ್ನೂ 100 ಬಾವಿಗಳನ್ನು ತೆಗೆಸುವುದಕ್ಕೆ ಖರ್ಚುಮಾಡಿ. 10 ಕೆರೆಗಳನ್ನು ಕಟ್ಟಿಸುವುದಕ್ಕೆ ಖರ್ಚು ಮಾಡಿ. ಹಾಗಲ್ಲದೆ ಶಾಸನ ಸಭೆಯ ತೀರ್ಮಾನಕ್ಕೆ ಮನ್ನಣೆ ಕೊಡುತ್ತೇವೆ ಎಂದರೆ ಈ ಹಣ ಖರ್ಚುಮಾಡಿ ಒಪ್ಪಿಗೆ ಕೊಡೋಣ, ಇಲ್ಲದೇ ಇದ್ದರೆ ಸಾಧ್ಯವಿಲ್ಲ ಎಂದು ಹೇಳುತ್ತಾ ಇದ್ದೇನೆ.

Maintenance and Repairs ವಿಷಯ ಶ್ರೀಮಾರ್ ಶಿವಪ್ಪನವರು ಹೇಳಿದರು. ಪುನಃ ಅದನ್ನೇ ಹೇಳುವುದಿಲ್ಲ, ಕೆಲವು ಸಬ್-ಡಿವಿಜನ್‌ಗಳನ್ನು ಹೊಸದಾಗಿ create ಮಾಡುವುದು, ಆಫೀಸುಗಳನ್ನು ತೆಗೆಯುವುದು ಹೆಚ್ಚಿನ ಸಂಬಳ ಅಲೋಯನ್ಸು ಅದು ಇದು ಕೊಡುವುದು ಈಗಿನ ತುರ್ತುಪರಿಸ್ಥಿತಿಗೆ ಹೊಂದಾಣಿಕೆ ಯಾಗುವುದಿಲ್ಲ ಎಂದು ಸರ್ಕಾರದವರಿಗೆ ಹೇಳುತ್ತೇನೆ.

ಇನ್ನು ಡಿಮ್ಯಾಂಡ್ ನಂಬರ್ 39ರಲ್ಲಿ 18 ಲಕ್ಷ ರೂಪಾಯಿ ಕೇಳಿದ್ದೀರಿ. Unforeseen expenditure in connection with maintenance of Law and order 1,75,000 Rupees. ಎಲ್ಲಿ ಸ್ವಾಮಿ ಇದು ! ಯಾವುದು ಇದು ? ದೇಶ ದ್ರೋಹಿಗಳನ್ನು ಹಿಡಿಯುವುದಕ್ಕೆ ಕೋಟಿ ರೂಪಾಯಿ ಖರ್ಚುಮಾಡಿ, ಒಂದು ಚಕಾರ ಕೂಡ ಎತ್ತುವುದಿಲ್ಲ. ಆದರೆ ಇದು ಯಾರನ್ನು ಹಿಡಿಯುವುದಕ್ಕೆ ? ಈ 1 ಲಕ್ಷ 75 ಸಾವಿರ ರೂಪಾಯಿ ಸಾಕಾಗುತ್ತದೆಯೇ ಈ ದೇಶದಲ್ಲಿರತಕ್ಕ ಕಮ್ಯಾನಿಸ್ಟರನ್ನು ಹಿಡಿಯುವುದಕ್ಕೆ, ಇದು ಅರ್ಥವಾಗುವುದಿಲ್ಲ.

Expenditure in connection with civil defence 50,000 Rupees. ಇದು ಸಾಕಾಗುತ್ತದೆಯೇ ? ನೀವೇ ಯೋಚನೆ ಮಾಡಿ, ಏಕೆಂದರೆ ದೆಹಲಿಗೆ ಶತ್ರುಗಳು ಬಂದು ಆಕ್ರಮಣ ಮಾಡುವ ಪರಿಸ್ಥಿತಿ ಇದ್ದಾಗ ಜನರು ಸುರಕ್ಷಿತವಾಗಿರಬೇಕಾದರೆ ಜನರಲ್ಲಿ ಪ್ರಾಪಗ್ಯಾಂಡ್ ಮಾಡಿ, ವಿಷಯ ತಿಳಿಸಲು ಕೇಂದ್ರದವರು ವಿಶೇಷವಾಗಿ ಹಣ ಖರ್ಚುಮಾಡುತ್ತಿರುವಾಗ ಇಲ್ಲಿ 50,000 ರೂಪಾಯಿ ಕೇಳಿರುತ್ತಿರುವುದರಿಂದ ಇದನ್ನು ಹೇಗೆ ಉಪಯೋಗಿಸುತ್ತೀರಿ ಎಂಬುದನ್ನು ಹೇಳಬೇಕೆಂದು ಒತ್ತಾಯಪಡಿಸುತ್ತೇನೆ.

Grant-in-aid to Municipalities on account of D.A., Land Revenue and non-agricultural Assessment ಎನ್ನುತ್ತೀರಿ ಇದು ಅರ್ಥವಾಗುವುದಿಲ್ಲ. ಈ 15 ಲಕ್ಷ ರೂಪಾಯಿ ಹಣ ಏಕೆ ? ಒಂದು ಮಾತ್ರ ಹೇಳುತ್ತೇನೆ. ಇವತ್ತು ಯಾರಿಗೂ ಸಂಬಳ ಜಾಸ್ತಿ ಮಾಡಬೇಡಿ ಯಾರಿಗೂ ಡಿ.ಎ. ಜಾಸ್ತಿ ಕೊಡಬೇಡಿ. ಹೊಸದಾಗಿ ನೇಮಕ ಮಾಡಬೇಡಿ, ರಿಟ್ರೆಂಚ್‌ಮೆಂಟ್ ಮಾಡಿ ದೊಡ್ಡ ದೊಡ್ಡ ಸಂಬಳ ತೆಗೆದುಕೊಳ್ಳತಕ್ಕ ಅಧಿಕಾರಿಗಳ ಸಂಬಳ ಕಡಿಮೆ ಮಾಡಿ ಎಂದರೆ......

ಶ್ರೀ ಬಿ. ಡಿ. ಜತ್ತಿ.—ಇದು arrears.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದೆಲ್ಲಾ ನಿಂತು ಹೋಗಬೇಕು ಇವತ್ತು, ಸ್ವಲ್ಪ ಅರ್ಥ ಅರ್ಥಮಾಡಿಕೊಳ್ಳಿ ಆರ್ಟಿಕಲ್ 14 ಸಸ್ಪೆಂಡ್ ಮಾಡಿರುವುದು, ಫಂಡಮೆಂಟ್‌ಲ್ ರೈಟ್ಸ್‌ಗೆ ಕುಠಾರ ಪ್ರಾಯವಾಗಿರುವಾಗ ಇನ್ನು ಟಿ.ಎ., ಡಿ.ಎ., ಹೆಚ್ಚಿಗೆ ಇನ್‌ಕ್ರಿಮೆಂಟು ಕೊಡಬೇಕೆನ್ನುವುದು ಅರ್ಥವಾಗುವುದಿಲ್ಲ.

When the country is facing a worst enemy, is it the way of exhibiting our patriotism ? True, the due share should

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

not be denied, but Government should think over hundred items before they make up their mind in this behalf.

Sri K. S. SURYANARAYANA RAO (Mysore City).—In an emergency we must keep the services contended.

Sri C. J. MUCKANNAPPA.—But that is not the way. We must first of all survive. ಹಣಕಾಸಿನ ಮಂತ್ರಿಗಳು ಇದನ್ನು ಸಾವಧಾನವಾಗಿ ಯೋಚನೆ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

43 ನೆಯ ಡಿಮ್ಯಾಂಡಿನಲ್ಲಿ ಬೆಂಗಳೂರಿನಲ್ಲಿ ನೀರು ಸರಬರಾಯಿ ವಿಚಾರವಿದೆ. ಮೊನ್ನೆ ತಾನೆ ಕಾವೇರಿಯಿಂದ ನೀರನ್ನು ಸರಬರಾಯಿ ಮಾಡುವುದಾಗಿ ಹೇಳುತ್ತಿದ್ದರು. ಚಾಮರಾಜಸಾಗರ ವಾಟರ್ ವರ್ಕ್ಸ್ ಸಂಬಂಧದಲ್ಲಿ ಮೂರನೇಯ ಪಂಚವಾರ್ಷಿಕ ಯೋಜನೆಯ ಬಾಬಿನಲ್ಲಿ 3,80,000 ರೂಪಾಯಿಗಳ ಬೇಡಿಕೆಯಿದೆ ಇದು ಯಾವುದಕ್ಕೆಂಬುದು ಅರ್ಥವಾಗುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಯಾವ ಯಾವ ಕೆಲಸ ಯಾವ ಯಾವ ಹಂತದಲ್ಲಿದೆಯೋ ಅಲ್ಲಿಗೇ ನಿಲ್ಲಿಸಬೇಕು. ಏಕೆಂದರೆ ನಿನ್ನೆ ಪ್ರಧಾನ ಮಂತ್ರಿಗಳು ರೇಡಿಯೋ ಭಾಷಣದಲ್ಲಿ. "If he does not go back, we will throw him out," ಎಂದು ಹೇಳಿದರು. If you want to throw the enemy out, what are your resources for doing so? Is it the way of mobilising the resources of the state? ಇದನ್ನೆಲ್ಲಾ ಸ್ವಲ್ಪ ನಿಲ್ಲಿಸಿ, ಜನರು ನಿಮನ್ನು ದೇಶ ದ್ರೋಹಿಗಳು ಎಂದು ಹೇಳಿದರೂ ಚಿಂತೆಯಿಲ್ಲ. ಹಣ ಉಳಿಸಲು ಎಲ್ಲಿ ಅವಕಾಶವಿದೆಯೋ ಅಲ್ಲಿ ಉಳಿಸಲು ಸರ್ಕಾರ ಪ್ರಯತ್ನ ಮಾಡಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಆಮೇಲೆ 46ನೆಯ ಡಿಮ್ಯಾಂಡಿನಲ್ಲಿ ಮೂರನೆಯ ಪಂಚವಾರ್ಷಿಕ ಯೋಜನೆ ಸ್ಕೀಮುಗಳಿಗೆ 94,15,000 ರೂಪಾಯಿಗಳನ್ನು ಕೇಳಿ ಹೊಸ ಕೆರೆ ಕಟ್ಟುವುದು, ಕೆರೆ ಜೀರ್ಣೋದ್ಧಾರ ಮುಂತಾದುವುಗಳಿಗೆ ಉಪಯೋಗಿಸಬೇಕೆಂದಿದ್ದಾರೆ, ಈ ಹಣ ಏನೇನೂ ಸಾಲದು. ಇದುವರೆಗೆ ಎಷ್ಟು ಮೈನರ್ ಇರಿಗೇಷನ್ ಕೆಲಸ ಮಾಡಿದ್ದೀರಿ, ಎಷ್ಟು ಹೊಸ ಕೆರೆ ಕಟ್ಟಿದ್ದೀರಿ, ಎಷ್ಟು ಪಿಕಪ್ ಮಾಡಿದ್ದೀರಿ, ಎಷ್ಟು ಅಚ್ಚು ಕಟ್ಟು ಹೊಸದಾಗಿ ನೀರಾವರಿಗೆ ಬಂದಿದೆ, ಎಷ್ಟು ಬೆಳೆ ಹೆಚ್ಚಿದೆ? ಈಗ ಮಾಡಿರುವುದು ಸಾಲದು, 46 ನೆಯ ಡಿಮ್ಯಾಂಡಿಗೆ ಈಗ ಒದಗಿಸಿರುವುದರ ಎರಡರಷ್ಟು ಹಣ ಒದಗಿಸಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

Capital outlay or forest ಎಂಬ ಬಾಬಿಗೆ 8,49,100 ರೂಪಾಯಿಗಳನ್ನು ಕೇಳಿದ್ದಾರೆ. ಈಗ ಇರುವ ಮಂತ್ರಿಗಳಲ್ಲಿ ಇಬ್ಬರಿಗೆ ಎರಡು ಖಾತೆಗಳಿವೆ. ಫಾರೆಸ್ಟ್ ಇಲಾಖೆಗೆ ಒಬ್ಬ ಸೆಕ್ರೆಟರಿ ಇದ್ದಾರೆ, ಚೀಫ್ ಕನ್ಸರ್ವೇಟರು, ಕನ್ಸರ್ವೇಟರು ಮುಂತಾದವರೆಲ್ಲಾ ಇದ್ದಾರೆ. ಡೆವಲಪ್‌ಮೆಂಟ್ ಆಫ್ ಬಿಲ್ಡಿಂಗ್ಸ್‌ಗೆ ಹಣ ಕೇಳಿದ್ದಾರೆ. ಇವತ್ತು ಈ ಕಟ್ಟಡಗಳೇಕೆ? 8,49,100 ರೂಪಾಯಿಗಳನ್ನು ಖರ್ಚುಮಾಡಿ ಕಟ್ಟಡ ಕಟ್ಟದೇ ಹೋದರೆ ಈ ದಿವಸ ಏನಾಗುತ್ತದೆ? ಇದನ್ನು ಸ್ವಲ್ಪ ಯೋಚನೆ ಮಾಡಬೇಕಾದ್ದು ಸರ್ಕಾರದ ಕರ್ತವ್ಯ.

ಆಮೇಲೆ 54 ನೆಯ ಡಿಮ್ಯಾಂಡಿನ ಬೇಡಿಕೆಯು ಒಪ್ಪತಕ್ಕದ್ದಾಗಿದೆ. 15,000 ಬಾವಿಗಳ ಕೆಲಸವನ್ನು ಪೂರೈಸುವುದಕ್ಕೆ, ಹೊಸ ಬಾವಿಗಳನ್ನು ಇರಿಗೇಷನ್‌ಗಾಗಿ ತೆಗೆಯುವುದು ಮುಂತಾದ್ದಕ್ಕೆ 93,60,000 ರೂಪಾಯಿಗಳನ್ನು ಕೇಳಿದ್ದಾರೆ. ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಯಬೇಕೆಂದು ಹೇಳುವಾಗ ಈ ಬಾಬಿಗೆ ಈಗ ಕೇಳಿರುವ ಹಣವನ್ನು ದ್ವಿಗುಣಗೊಳಿಸಬೇಕು. ಹಾಗೆ ಮಾಡಿ ಹಿಂದೆ ಕೊಟ್ಟ ಮೂರು ಸಾವಿರ ರೂಪಾಯಿಗಳಿಗೆ ಬಾವಿ ಪೂರೈಸಲು ಸಾಧ್ಯವಾಗಿಲ್ಲದವರಿಗೆ ಇನ್ನು ಸ್ವಲ್ಪ ಹಣ ಕೊಟ್ಟು ಪೂರೈಸಲು ಮಾರ್ಗ ಮಾಡಿಕೊಡಬೇಕು. ಹಾಗೆ ಮಾಡಿದರೆ ಒಳ್ಳೆಯದು. ಅರ್ಧತೆಗೆದಿರುವ ಬಾವಿಗಳು ಅನುಪಯೋಗವಾಗಿವೆ, ಅವನ್ನು ಪೂರ್ಣಮಾಡಲು ಹೆಚ್ಚು ಹಣ ಕೊಡಬೇಕು ಎಂದು ವಿನಂತಿ ಮಾಡುತ್ತೇನೆ.

49 ನೆಯ ಡಿಮ್ಯಾಂಡಿನಲ್ಲಿ ಸೂಚಿಸಿರುವ 1,72,500 ರೂಪಾಯಿಗಳನ್ನು ಈಗಾಗಲೆ ಕೊಟ್ಟಿಲ್ಲದಿದ್ದರೆ ಅದನ್ನು ಕೊಡಬಾರದೆಂದು ಹಣಕಾಸಿನ ಮಂತ್ರಿಗಳಲ್ಲಿ ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ನವಜ್ಯೋತಿ ಸ್ಟುಡಿಯೋ ಬೇರೆಯವರಿಗೆ ಕ್ರಯವಾಗಿದೆ. ಇವತ್ತು ಶಿವರಾತ್ರಿ, ನವರಾತ್ರಿ ಯಾವುದೂ ಬೇಡ, ಈ ದಿವಸ ಮಕ್ಕಳು ಚಾವಡಿಗಳಲ್ಲಿ, ದೇವಸ್ಥಾನಗಳಲ್ಲಿ ಮತ್ತು ಮರದ ಕೆಳಗೆ ಓದಬೇಕೆಂದು ಹೇಳುವಾಗ ವಶೀಲಿಬಾಜಿಗೆ ಬಿದ್ದು ಇಷ್ಟು ಹಣ ಕೊಡುವುದು ಸರಿಯಲ್ಲ, ಇದಕ್ಕೆ ಯಾರು ಎಷ್ಟೇ ಪ್ರಭಾವ ಬೀರಿದರೂ ಜತ್ತಿಯವರು ಸರಿಯಾಗಿ ಪರೀಕ್ಷಿಸಬೇಕಾದ ಕಾಲ ಬಂದಿದೆ. ಹಣ ಕೊಟ್ಟರೆ ಉತ್ಪತ್ತಿಯಿದೆಯೇ, ಸದುಪಯೋಗವಾಗುವುದೆ ಎಂದು ನೋಡಬೇಕಾಗಿದೆ. ಇದನ್ನು ಸಾಧಾರಣ ಪರಿಸ್ಥಿತಿಯಲ್ಲಿ ಸಪ್ಲಿಮೆಂಟರಿ ಗ್ರಾಂಟ್‌ನಲ್ಲಿ ಕೇಳಿದರೆ ನಾವು ಸುಮ್ಮನಿರುತ್ತಿದ್ದೆವು, ಈ ದಿವಸದ ಸಂದರ್ಭಹಾಗಿಲ್ಲ, ಆದುದರಿಂದ ಈ ಸಭೆಯಲ್ಲಿ ಸೂಚಿತವಾಗಿರುವ ಪ್ರತಿಯೊಂದು ಸಲಹೆಯನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಬಹಳ ಎಚ್ಚರಿಕೆಯಿಂದ ಈ ಹಣವನ್ನು ಖರ್ಚುಮಾಡಬೇಕಾಗಿದೆ. ಹಾಗೆ ಮಾಡಿ ಜತ್ತಿಯವರು ಮುಂದೆ ಕೇಂದ್ರದಲ್ಲಿ ಹಣಕಾಸಿನ ಮಂತ್ರಿಗಳಾಗಲಿ. ಭಾರತ ಭೂಮಿಗೆ ಬಂದಿರುವ ದುರ್ದಿನ, ಗಂಡಾಂತರ ದೂರವಾಗುವವರೆಗೆ ಕಟ್ಟಡಗಳು, ಉದ್ಯಾನವನಗಳು ಮುಂತಾದುವುಗಳ ಕೆಲಸ, ಮನೆಯ ಮುಂದೆ ಶೃಂಗಾರ ಇವೆಲ್ಲವನ್ನೂ ಸ್ವಲ್ಪ ನಿಲ್ಲಿಸಿ.

ಇನ್ನೊಂದು ವಿಚಾರ, ಅಡೀಷನಲ್ ಡೆಪ್ಯುಟೀ ಕಮಿಷನರನ್ನು ನೇಮಿಸುವರೆಂದು ತಿಳಿದು ಬಂದಿದೆ. ಕಂದಾಯ ಮಂತ್ರಿಗಳು ಈ ವಿಚಾರದಲ್ಲಿ ಸ್ವಲ್ಪ ಪರಿಶೀಲನೆ ಮಾಡಬೇಕು.

Additional Deputy Commissioners ಬೇಡ. ಅವರನ್ನು ಬೇರೆ ಎಲ್ಲಾದರೂ ಇಟ್ಟು ಕೊಳ್ಳಲಿ. ಬೇಕಾದರೆ ಅವರನ್ನು ಡೆಪ್ಯುಟಿ ಸೆಕ್ರೆಟರಿಗಳಾಗಿ ನೇಮಕ ಮಾಡಿ ಇಟ್ಟುಕೊಳ್ಳಲಿ. ಅದು ಬಿಟ್ಟು ಈಗಾಗಲೇ ನೇಮಕ ಮಾಡಿದ್ದೇವೆಂದು ಹೇಳಿದರೆ ಹೇಗೆ? "ಮೂರ್ಖಂಗೆ ಬುದ್ಧಿಯನು ನೂರ್ಕಾಲ ಹೇಳಿದರು, ಗೋರ್ಕಲ್ಲಮೇಲೆ ಮಳೆ ಹುಯ್ದರಾಕಲ್ಲು ನೀರ್ಕುಡಿಯಬಲ್ಲುದೇ ಸರ್ವಜ್ಞ" ಎಂಬುದು ಜ್ಞಾಪಕಕ್ಕೆ ಬರುತ್ತದೆ...

4-00. P. M.

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ವಜ್ಞ ನೀವಾದರೆ ಮೂರ್ಖರು ಯಾರು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊದಲು ಆಹಾರ ಮಂತ್ರಿಗಳಾಗಿದ್ದು, ಆಮೇಲೆ ವ್ಯವಸಾಯ ಮಂತ್ರಿಗಳಾಗಿ ಈಗ ಇಲ್ಲಿ ಕಂದಾಯ ಮಂತ್ರಿಗಳಾಗಿ ರಾರಾಜಿಸುತ್ತಿದ್ದೀರಿ, 'ರಾಜಸ್ವಮಂತ್ರಿ' ಗಳೆಂದು ಬೋರ್ಡ್ ಹಾಕಿಸಿ ಕೊಂಡಿದ್ದೀರಿ.

Mr. DEPUTY SPEAKER.—The Hon'ble Member must withdraw that. He cannot call any section of this House as a group of fools.

Sri C. J. MUCKANNAPPA.—That was not at all my intention.

Mr. DEPUTY SPEAKER.—Intention is different.

Sri C. J. MUCKANNAPPA.—This is not what I have said. This is what Sarvajna has written.

Mr. DEPUTY SPEAKER.—You are also an Hon'ble Member of this House and it may apply to you also. That is why I say this should not be said of any member of this House.

Sri C. J. MUCKANNAPPA.—All right, sir, I do not want to spend my time on that.

ಸ್ವಾಮಿ, ಇದು ಸಾಮಾನ್ಯ ಕಾಲದಲ್ಲಿ ತರಬಹುದಾದುದು, ಆದರೆ ಈಗ ತುರ್ತು ಪರಿಸ್ಥಿತಿ ಬಂದಿದೆ. ಎಲ್ಲೆಲ್ಲಿ ದೋಷವಿದೆ, ಲೋಪವಿದೆ ಎನ್ನುವುದನ್ನು ನನಗೆ ತಿಳಿದಮಟ್ಟಿಗೆ ತಿಳಿಸಿದ್ದೇನೆ. ಹೆಚ್ಚು ಆಹಾರ ಬೆಳೆಯಲು ಸಾಧಕವಾದ ಕೆರೆಗಳು, ಬಾವಿಗಳು ಮುಂತಾದುವುಗಳ ನಿರ್ಮಾಣಕ್ಕೆ ಮತ್ತು ಯುದ್ಧಕ್ಕೆ ಸಹಾಯಕವಾಗುವ ಕೆಲಸಗಳಿಗೆ ಮಾತ್ರ ಹಣವನ್ನು ಉಪಯೋಗಿಸಬೇಕೆಂದು ಹೇಳಿ, ನನಗೆ ಇಷ್ಟು ಹೇಳಲು ಅವಕಾಶ ಕೊಟ್ಟುದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri GANJI VEERAPPA (Harihar).—Sir, There are several supplementary demands on which very valuable suggestions have been offered. This being a national emergency, I wish to confine my remarks to offer some suggestions for economy in the various departments which I hope will be very useful for Government at this juncture.

With regard to the Revenue Department, the Hon'ble Minister for Revenue may consider whether there is sufficient work for the Tahsildars. Formerly the Tahsildars used to look after the collection work as well as N. E. S. work. In Maharashtra I am told there only one officer who looks after both collection work and also N. E. S. work. After the N. E. S. scheme is introduced, it is the B.D.O.'s who have become very important and powerful for development work and the Tahsildars are doing only collection work. As a measure of economy I suggest that the Government may think of having only one officer to look after both the work of the B.D.O. and also the Tahsildar.

